ಯಲಿನುಡಿಯಲಿ

ಎ. ಬಸವರಾಜ.



ಲೆ ೧ ಕುಸುಮ ಐದು

ಂಡಾರದ ೧೧ ನೇಯ ನಿಧಿ

ಬಯಲಿ ಸುಡಿಯಲ್ಲಿ

ಜಿ. ಎ. ಬಸವರಾಜ

(ಬಾಡಿಗಿ)

ಭಾರತೀ ಸಾಹಿತ್ಯ ಭಂಡಾರ
ಯರನಾಳ ಜಿ. ಬಿಜಾಪುರ.

೩ ಎಪ್ರೀಲ ಬೆಲೆ ೫೦ ನಯೆಪೈಸೆ.

ಸಂಪಾದಕರು—
'ಸಿಸು' ಸಂಗಮೇಶ

ಸಲಹಾಸಮಿತಿ

ಸರ್ವಶ್ರೀ—
ಸಿಂಪಿ ಲಿಂಗಣ್ಣ ಚಡಚಣ, ಮಿರ್ಜಿ ಅಣ್ಣಾರಾಯ ಶೇಡಬಾ
ಶ್ರೀಕೃಷ್ಣ ಪಾಟೀಲ ಬೆಳಗಾಂವಿ ಈಶ್ವರಚಂದ್ರ ಚಿಂತಾಮಣಿ
ನಾಗಠಾ
ಮಹಾಂತ ಗುಬಗಂಜಿ ಬಿಜಾಪುರ ಶಂ. ಗುಂ. ಸಾರವಾಡ
'ಶಿವಕುಮಾರ, ಹಳ್ಳಿ' (ಜತ್ತ) ನಾರಾಯಣ ಕೊರ್ಕೆ,
ಬಿ. ರಾಮಚಂದ್ರಭಟ್ಟ ಮುಂಡಾಜೆ ಪ. ಸೀತಾರಾಮಭಟ್ಟ
ಮಿತ್ತ ಬೈ
ಅ. ಅನಂತಯ್ಯಾ ನಾವಡ ಮಂಗಳೂರು
ಎಸ್. ವಿ. ಕೋನೇರಿಪುರ ಅಯನೂರು
ಕೆ. ಪಿ. ಶಿವಲಿಂಗಯ್ಯ ಮೈಸೂರ ಮ. ಮಲ್ಲಪ್ಪ ಹಲಗೂರು

ಪ್ರಕಾಶಕರು
'ಹರಿಹರ'
ಭಾರತೀ ಸಾಹಿತ್ಯ ಭಂಡಾರ
ಯರನಾಳ, ಬಿಜಾಪುರ ಜಿಲ್ಲೆ

ಮುದ್ರಕರು:
ಶ್ರೀಮತಿ ಶಕ್ರೆವ್ವ್ವನವರ
ಎಸ್. ಆಲಗೊಂಡ
ಶಶಿಕಲಾ ಪ್ರೆಸ್, ವಿ...

ಅರ್ಪಣಾ

—o—

ಶರಣಜೀವಿ—

ಶ್ರೀ ಕೋರೆ ಸಿದ್ಧರಾಮಪ್ಪಣ್ಣನವರಿಗೆ-

— ಬಸವರಾಜ —

ಕಿರು ನುಡಿ

ರಸಿಕ ಓದುಗರೆ

ಪ್ರಥಮ ಕೃತಿಯಾದ 'ನಿಸರ್ಗ ನುಡಿ' ಕವನ ಸಂಕಲ
ತಮ್ಮೆಲ್ಲರಿಗೆ ತಲುಪುತ್ತಿರುವ ಹೊತ್ತಿನಲ್ಲಿಯೇ, ಮೊದಲನೇ
ಕಥಾ ಸಂಕಲನವಾದ 'ಬಯಲಿನುಡಿಯಲ್ಲಿ' ತಮ್ಮ ಮುಂ
ಸಲು ಸಂತೋಷ ವೆನಿಸುತ್ತದೆ.

ಕಾಲಕ್ಕೆ ತಕ್ಕಂತೆ ಮನಸ್ಸಿನಲ್ಲಿ ಏರಿಳಿತ ನಡೆವುದು ನಿ
ವಾಗಿದೆ. ಇದನ್ನನುಲಕ್ಷಿಸಿ ಕಥೆಗಳನ್ನು ಹೊಸೆಯಲಾಗಿ
ಬಯಲಿನುಡಿಯಲ್ಲಿ ಮನೋ ವಿಶ್ಲೇಷಣದ ದರ್ಶನವಾದ
ಮನೋ ವೇಧಕ ಪರಿಸ್ಥಿತಿಯ ಪರಿಣಾಮ ಹೃದಯ ಸ್ಪ
ಯಾದಲ್ಲಿ ಶ್ರಮಸಾರ್ಥಕವಾದಿದೆ ಮನಕ್ಕೊಂದು ನೆಮ್ಮದಿ.

ನನ್ನಿಕೃತಿಯನ್ನು ಬೆಳಕಿಗೆ ತಂದ ಭಾರತಿ ಭಂಡಾ
ಸಂಪಾದಕರಿಗೂ, ಈ ಕಾರ್ಯದಲ್ಲಿ ಸಹಾಯ-ಸಲಹೆ ನೀ
ಗೆಳೆಯರಿಗೂ ನಾನು ಚಿರ ಋಣಿಯಾಗಿರುವೆ.

ಶುಭಾಶಯ

ಟಕ್ಕಳಕಿ

ದಿನಾಂಕ ೬—೫—೫೭

ಶ್ರೀ ಬಸವರಾಜರಲ್ಲಿ,

ಮಾನ್ಯರೆ;

ನಿಮ್ಮ "ಬಯಲಿನುಡಿಯಲ್ಲಿ" ಕಥಾ ಸಂಕಲನವನ್ನು ಓದಿ ಆನಂದ ಪಟ್ಟೆ; ಕಾಲಮಾನ, ಪರಿಸ್ಥಿತಿಗನುಗುಣವಾಗಿ ಹೃದಯ ದಾಳದಲ್ಲುಂಟಾದ ಏರಿಳಿತದ ಪರಿಣಾಮವಾಗಿ ಕಥೆಗಳು ರಚಿತ ವಾಗಿವೆ. ಮನಾಕರ್ಷಕವಾಗಿವೆ. ಝುಳಕಿಯಂಥ ಹಳ್ಳಿ ಯಲ್ಲಿ ನಿಂತು ಸಾಹಿತ್ಯ ಸರ್ವೇಶ್ವರಿಯ ಸೇವೆ ಗೈಯ್ಯುವ ನಿಮಗೆ ಮಂಗಲವಾಗಲಿ,

ತಮ್ಮ

ಮುಂಡಪ್ಪ ಉಪಾಸೆ.

ಡಿ. ಎಲ್. ಬಿ. ಮೆಂಬರ

— ನಮ್ಮ ನುಡಿ —

ಈ ಕೃತಿಗೆ ಮಾಲೆಯ ಮೊದಲವರುಷ ಮುಕ್ತಾಯವಾಯಿತು. ಯೋಜನೆಯಂತೆ ಕರ್ನಾಟಕದ ಬೇರೆ ಬೇರೆ ವಿಭಾಗದ ಶಿಕ್ಷಕರ ಕೃತಿಗಳನ್ನು ಸೇರಿಸಲಾಗಿದೆ. ಮುಂದಿನಸಲ ದ. ಕನ್ನಡ, ಹೈದರಾಬಾದ,ಕೊಡಗು ಇತ್ಯಾದಿ ವಿಭಾಗಗಳ ಸಾಹಿತಿ ಶಿಕ್ಷಕ ಮಿತ್ರರ ಕುಸುಮಗಳನ್ನು ಹೆಣೆಯುವೆವು. ಅಲ್ಲದೆ ಗೆಳೆಯರ ಇಚ್ಛೆಯಂತೆ ಕಾದಂಬರಿಗಳನ್ನು ಹೆಚ್ಚು ಸೇರಿಸುವೆವು. ಆಯಾ ವಿಭಾಗದ ಶಿಕ್ಷಕರು ಮುಂದೆ ಬಂದು ತಮ್ಮ ವಿಭಾಗದ ಶಿಕ್ಷಕ ಮಿತ್ರರ ಪರಿಚಯಮಾಡಿ ಕೊಟ್ಟು, ತಮ್ಮ ಸಂಶಯ ಸಮಸ್ಯೆಗಳನ್ನು ಎದುರಿಗಿಟ್ಟು ಸಲಹೆ ಸೂಚನೆಗಳನ್ನು ನೀಡಲು ಬಿನ್ನಹ.

ಭಂಡಾರದ ಬಿಡಿ ಕುಸುಮವಾಗಿ ಅರಳಿದ ಇದೇ ಲೇಖಕರ ನಿಸರ್ಗ ನುಡಿಯಲ್ಲಿ ಶ್ರೀ ಬಸವರಾಜರ ಪರಿಚಯ ಮಾಡಿ ಕೊಡಲಾಗಿವೆ. ಇದೇ ಹೊಸದಾಗಿ ಕಲಾರಂಗಕ್ಕಿಳಿದ ಕು. ವಿಶ್ವನಾಥರವರು ಸುಂದರವಾಗಿ ಮುಖಚಿತ್ರ ಬರೆದುಕೊಟ್ಟು ಉಪಕರಿಸಿದ್ದಾರೆ. ಜೊತೆಗೆ ಹೊಸದಾಗಿ ಅಚ್ಚುಕೂಟ ಸ್ಥಾಪಿಸಿ ಮುದ್ರಣ ಕಾರ್ಯದಲ್ಲಿ ನೆರವಾದ ಶ್ರೀ ಬೀಳಗಿ ಬಂಧುಗಳಿಗೆ ಅನಂತ ಅಭಿನಂದನೆಗಳು.

ಹಿಂದು ನಿಂತು ನೆರವು ನೀಡುವ ಗೆಳೆಯರಿಗೆ ಅನಂತ ಉಪಕೃತಿಗಳು.

ಹೊನಗನಹಳ್ಳಿ   ಸಂಪಾದಕರು.

ಬಯಲಿನುಡಿಯಲ್ಲಿ

ಭೂತಕಾಲದಲ್ಲಿ ಜೀವಿಸಿದ ಜನಜೀವನದ ರೀತಿ–ನೀತಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚಾರ-ವಿಚಾರ, ನಡೆ–ನುಡಿ, ಒಲವು–ನಿಲುವು, ಮೊದಲಾದವುಗಳನ್ನು ಆ ಕಾಲದ ರಾಜರು ಅಳವಡಿಸಿ ತಮ್ಮ ಬಾಳಿನಲ್ಲಿ ಕಹಿ ಸಿಹಿ ಗುಳಿಗೆಗಳನ್ನು ನುಂಗಿ ಹೇಗೆ ಮೆರೆದರೆಂಬ ಸಂಕೇತಗಳು, ಭಾವೀ ಜೀವನಕ್ಕೆ ನಿರಂತರ ಮಾರ್ಗದರ್ಶಕವಾಗಿವೆ. ಹೊಸ ಬಾಳನ್ನು ಹದಗೊಳಿಸಲು ಮೊದಲಾಗಿವೆ. ಅಂತೇ ವರ್ತಮಾನಕಾಲದಲ್ಲಿ ಹಿರಿಮೆಯಸ್ಥಾನ ದೊರೆತಿದೆ ಇತಿಹಾಸಕ್ಕೆ.

೧೯ನೆಯ ಶತಮಾನದ ಉತ್ತರಾರ್ಧದಲ್ಲಿ ನನ್ನ ಬದುಕಿಗೆ ಅಷ್ಟೇ ಅಲ್ಲ ನನ್ನನ್ನು ನಂಬಿದ ಎರಡು ಬಾಳುಗಳಿಗೂ ಸೊನ್ನೆ ಬಿದ್ದಿತು. ಅಲ್ಲ! ಅಲ್ಲ! ಭಾರತಕಾಲದ್ದೊಂದು ಪ್ರಜ್ವಲಿಸುವ ರಾಜಪೀಠವು ಅನ್ಯರ ಪಾಲಾಯಿತು. ಅದರ ಕಾರಣವನ್ನು ನನ್ನ ಬಾಳ ಹೇಳಿಕೆಯಲ್ಲಿ ಕಂಡಲ್ಲಿ ವಾಚಕರೆ ಕಾಣಿಸಿಕೊಳ್ಳಲಿ.

* * * *

ನಾನೇನು ಸಾಮಾನ್ಯ ಬಾಳುಬನದಲ್ಲಿ ಮೂಡಿ ಬಂದವಳಲ್ಲ. ನಂದನವನದ ಲತೆಯ ಪುಷ್ಪ. ರಾಜ ವೈಭವದಲ್ಲಿ ಜನಿಸಿ ಬೆಳೆದವಳು. ನನ್ನ ಬಾಲ್ಯ ಹೇಗೆ ಜಾರಿತೋ ನನಗೆ ಹೇಳಲು ಬಾರದು. ನನ್ನ ಸುತ್ತೆಲ್ಲ ಆನಂದವೇ ಮುತ್ತಿ

ಮುದ್ದಿಡುತ್ತಿದ್ದಿತು. ಅರಮನೆ ಹಾಗು ಉದ್ಯಾನದಲ್ಲಿ ಆಡದ
ಆಟವಿಲ್ಲ, ನೋಡದ ನೋಟವಿಲ್ಲ. ಆ ಗಳಿಗೆ ಅನ್ಯತಗಳಿಗೆ.
ತಂದೆಯು ಓಲಗ ಮುಗಿಸಿ ಸದನ ಸೇರಿದನೆಂದರೆ ನನ್ನ
ಸಂತಸಕ್ಕೆ ಪಾರವೇ ಇಲ್ಲ. ನನ್ನ ಲಲ್ಲೆಯಲ್ಲಿ ಪಾಲುಪಡೆದು
ಬಾಲ್ಯ ಹೊಂದಿ, ಹೊಸಜೀವಿಯಾಗಿ ಹೋರಬಿಳುತ್ತಲಿದ್ದ.
ನನ್ನ ಪಡೆದೊಡಲಹಿಗ್ಗಿನ ಬುಗ್ಗೆಯಿಂದೊಸರುವ ನಲ್ಮೆರಸ
ದಲ್ಲಿ ಸದಾವಕಾಲ ಹಸಿಯಾಗಿ ಚಿಗುರುತ್ತಲಿದ್ದೆ. ದೇಹಕ್ಕೆ
ವಸಂತನು ಬಣ್ಣ ಬಳಿಯುವಹೊತ್ತಿನಲ್ಲಿಯೇ ಒಂದು ಘಟನೆ
ನಡೆದು ಹೋಯಿತು. ಅದು ತಂದೆಯ ಹೃದಯದಲ್ಲಿ ಅಸೂ
ಯೆಯ ಜಿನುಗು ಕಿಡಿಯನ್ನು ಉದುರಿಸಿತು. ದಿಲ್ಲಿಯ ಅನಂಗ
ಪಾಲದೊರೆಗೆ ನನ್ನ ತಾತನೂ ಹಾಗು ಅಜಮೀರದ ಪೃಥ್ವಿ
ರಾಜನೂ ಸರಿಯಷ್ಟೆ! ಇವರೀರ್ವರು ಆತನ ಹೆಣ್ಣುಮಕ್ಕ
ಳಿಂದ ಮೊಮ್ಮಕ್ಕಳೆಂದ ಮೇಲೆ ಸರಿಯಲ್ಲದೆ ತಾನೆ ಹೇಗೆ
ಅಜ್ಜನಿಗೆ ಗಂಡು ಸಂತತಿ ಇಲ್ಲದುದಕ್ಕಾಗಿ ತನ್ನ ಅರಸೊತ್ತಿ
ಅಜಮೀರದ ಪೃಥ್ವಿರಾಯನಿಗೆ ಆಸ್ತಿಯನ್ನಾಗಿ ಮಾಡಿದ ಘ
ನೆಯೇ ಪಿತನಲ್ಲಿ ಅಸೂಯೆಗೆಡೆಮಾಡಿಟ್ಟಿತು. ಆ ಸಂಗ
ಸ್ಮರಣೆಗೆ ಬಂದಾಗ ತಂದೆಯ ಮನಸ್ಸು ಸಿಡಿಮಿಡಿಗೊಳ್ಳುತ್ತಿತ್ತು
ಮಾನವನಿಗೆ ಸಕಲ ಸಮೃದ್ಧಿ ಇದ್ದರೂ ಮನದಾಶೆಗೆ ಅ
ಕಡಿಮೆಯೇ, ತನ್ನ ಮೀರಿಸುವವರಿದ್ದಲ್ಲಿ ಅದರಾಚೆಗೆ ಆಶೆ
ಕುಡಿಚಾಚಿ ಹೃದಯದಲ್ಲಿ ಅಶಾಂತತೆಯ ಅಲೆಗಳನ್ನೆಬ್ಬಿಸದಿರದ

ನನ್ನ ಶರೀರವರಳಿತು, ಪರಿಮಳ ಬೀಗಿತು, ಪ್ರಾ
ಹುಟ್ಟಮನೆ ಬಿಟ್ಟು ಹೊರಮೂಡುವದೆಂಬುದು ಆಗ ತಿಳಿ
ಹೋಗಲಿಲ್ಲ.

ತಂದೆ ಜಯಚಂದನು ನನ್ನ ಒಳಿತಿನಲ್ಲಿ ತೊಡಗಿದ. ಅಂದರೆ ಈ ವರೆಗೆ ಅಹಿತ ಬಯಸಿದ್ದನೆಂದಲ್ಲ. ಈ ವರೆಗೆ ರಾಜನ ಮಗಳಾಗಿ ಬೆಳೆದ ನಾನು ಮುಂದೆ ಅರಸನ ಅರಸಿಯಾಗಿ ಬಾಳಬೇಕೆಂಬುದು ಅವನ ಹೆಬ್ಬಯಕೆಯಾಗಿತ್ತು.

ಇಂದಿನ ಕಾಲದಲ್ಲಿಯಾವರೂ ತನ್ನ ಮಗಳು, ಅಲ್ಲ! ಅಲ್ಲ! ತನ್ನೆದೆಯ ಮುಗುಳು ಹಾಯಾಗಿಬಾಳಲು, ಉಚಿತ ಮನೆಯ ಓರಿಗೆಯವನನ್ನರಸಿ ಜೋಡಿಯನ್ನಾಗಿ ಮಾಡುವದು ರೂಢಿಯಾಗಿದೆ. ಬಿಡಿ ಬಿಡಿಯಾಗಿ ವರರನ್ನು ಸಂದರ್ಶಿಸಿ ಸರಿಹೊಂದಿದಲ್ಲಿ ಸಂಗಮಿಸಲು ಸಂದೇಹ ಇಂದಿಲ್ಲವಾದರೆ, ಪ್ರದರ್ಶನದಂತೆ ಅಂದು ವರರನ್ನು ಒಂದುಗೂಡಿಸಿ ತನ್ನ ಮನದನ್ನನನ್ನಾರಿಸಲು ವಧುವಿಗೆ ಸ್ವಾತಂತ್ರ್ಯವಿತ್ತು. ತನ್ನೊಲುಮೆಗೆ ನಿಲುಕಿದವನನ್ನು ಕೂಡಿದವರಲ್ಲಿ ಹುಡುಕಿದರೆ ತೀರಿತು, ಆತನೊಡನೆ ವಿವಾಹ. ತಂದೆಯು ಯಾವತ್ತೂ ಅರಸುಗುವರರಿಗೆ ಸ್ವಯಂವರದ ವಾರ್ತೆ ತಿಳಿಸಲಣಿಯಾದ. ಆದರೆ....? ನನ್ನ ಮನಸ್ಸು ಸೂರೆಗೊಂಡ ಸ್ವುರದ್ರೂಪಿ ನನ್ನ ಕೈಗೆ ಸಿಗಲಿಕ್ಕಿಲ್ಲವೆ. ....? ನನ್ನ ಮೈ ಜುಮ್ಮೆದಟ್ಟಿಸುವ ರೂಪ ಕತ್ತಲಲ್ಲಿಯೂ ಕಾಣಿಸುತ್ತಿತ್ತು ಆವುದೋ ವೇದನೆಯಿಂದ ಮನಸ್ಸು ಮಿಡುಕುತ್ತಿತ್ತು. ವರಾನ್ವೇಷಣ ಸ್ವಾತಂತ್ರ್ಯವಿದ್ದ ಕಾಲದಲ್ಲಿ ಮನನಟ್ಟ ಮೂರ್ತಿಯು ಕೈ ಹಿಡಿಯುವದು ಸುಲಭವಾದರೂ,........! ಬೇರೆ ಆತಂಕಗಳು ಒದಗದಿದ್ದರೆ ಒಳಿತು. ನನ್ನ ತಂದೆಯ ಮನಸ್ಸು ಎಲ್ಲ ಅರಸರ ಕೂಡ ಸರಿಯಾಗಿರಬೇಕಲ್ಲ? ಸರಿಯಿಲ್ಲದ ರಾಜುರಂಗಣದಲ್ಲಿ ನನ್ನ ಪ್ರೇಮಗಂಗೆ ಹರಿದರೆ........? ಇಕ್ಕಟ್ಟಿನ ದರಿಗಳಲ್ಲಿ ಹರಿದು ನೀರ-

ವಾಗಿ ಸಾಗರ ಗುರಿ ಸೇರಿದಲ್ಲಿ, ಜನನ ಕೊಟ್ಟವರ ಹೃದಯ
ಬಗ್ಗಡವಾಗದಿದ್ದಲ್ಲಿ ಚೆನ್ನು ಅಲ್ಲವೆ! ನಿಯತ ದಿನಗಳ
ಸನಿಹಿಸಿದವು.

ನಾಳೆ ಸುದಿನ. ಇಂದು ಸಂಜೆ ಎಲ್ಲೆಡೆಗೂ ಆ ಸಮಾ
ರಂಭದ ಗದ್ದಲವೇ ಗದ್ದಲ. ಸ್ವಯಂವರ ಸರಾಗವಾ
ಸಾಗಲು ಮುನ್ನೆಚ್ಚರಿಕೆಗಾಗಿ ಪರಿಚಾರಕರ ಕಾರ್ಯ ಅವಾ
ಹತವಾಗಿ ಸಾಗಿತ್ತು. ಆಮಂತ್ರಿತ ಅರಸಕುವರರೆಲ್ಲ ಕನೋ
ಜದ ತಂಗುಮನೆಗಳ ಬಳಿಸಾರಿದ್ದರು. ನನ್ನ ಸೇವಕಿಯಿಂ
ತಿಳಿದ ಸುದ್ದಿ ಶರೀರವನ್ನು ಸುಡತೊಡಗಿತು. ಆ ಸಂಜೆಯ
ಊಟ ಹಸಿವೆಗಾಗಿ ಆಗದೆ ಊಟದ ನೇಮಕ್ಕಾಗಿ ಪರಿಣಮಿ
ಸಿತು. ರಾತ್ರಿಯೆಲ್ಲ ನಿದ್ರೆಬಾರದೆ ಹಾಸಿಗೆಯಮೇಲೆ ಅಶಾಂ
ಮನದಿಂದ ಹೊರಳಾಡುತ್ತ ವೇಳೆ ನೂಕಿದೆ. ಉಷಃಕಾ
ಕನೋಜದ ರಾಜನ ಬಾಳುಬನದಲ್ಲರಳಿದ ಮಲ್ಲಿಗೆಯ ಸೌ
ಭಕ್ಕಾಗಿ ನೆರೆದ ದುಂಬಿಗಳಿಗೆ ನವಚೇತನ ತುಂಬಿರಬೇಕು
ಆವುದೂ ತಣಿವು ನೀಡಲು ಸಿದ್ಧವಿರಲಿಲ್ಲ.

ರಾಜಪುತ್ರರ ಸಮ್ಮೇಳನ ಸೇರಿತು. ನನ್ನ ಶೃಂಗಾರ
ಎಲ್ಲೆ ಇಲ್ಲದಾಯಿತು. ಗೊತ್ತಾದ ಹೊತ್ತು ಸನ್ನಿಹಿತವಾಯಿತ
ಹೆತ್ತವರಿಂದ ಹರಕೆ ಹೊತ್ತು ಸ್ವಯಂವರದ ಸುಂದರ ಹಂ
ದಲ್ಲಿ ಬಲಗಾಲ ಹೆಜ್ಜೆ ಇಟ್ಟು ಮುನ್ನಡೆದೆ. ರಾಜಕು
ರನ್ನು ನಸುದಿಟ್ಟಿಸುತ್ತ ಸಾಗಿದೆ. ಕಂಡವರಲ್ಲಿ ಯಾರು ಸರಿ ಕಾ
ಲಿಲ್ಲ. ಮುಂದೆ ಸಾಗಿದೆ ಸಭೆಯ ಹೆಬ್ಬಾಗಿಲಲ್ಲಿ ಮನ
ನಿಲಿಸಿದುದು ಗೋಚರಿಸಿತು. ವದನದಿಂದ ನಸಗರಿಸುವ
ಮಂದಸ್ಮಿತ ಜಾರಿತು. ಉನ್ಮಾದದಾವೇಶದಲ್ಲಿ ವಿಚಾರವು ಬ

ವನ್ನಾಶ್ರಯಿಸುತ್ತದೆ ಎಂಬ ಮಾತು ಮನವರಿಕೆಯಾಯಿತು. ಹಿಂದೆ ಹೊರಳಿ ನೋಡಲಿಲ್ಲ. ನಿಧಾನಿಸಿದ ಕಾಲುಗಳು ತಾವಾಗಿಯೇ ತೀವ್ರಗತಿ ಹೊಂದಿದವು. ನನ್ನ ಹೃದಯ ಹರಣ ಮಾಡಿದ ಮೂರ್ತಿಯನ್ನು ಸಮೀಪಿಸಿದೆ ಕರದಲ್ಲಿಯ ಪೂಮಾಲೆ ನೋಡನೋಡುವಷ್ಟರಲ್ಲಿ ಎದುರಿಗಿನ ಪುತ್ಥಳಿಯ ಕೊರಳಿಗೆ ಬಿತ್ತು. ಎಲ್ಲವೂ ಮಿಂಚಿನಂತಾಯಿತು. ಸಾಮಾನ್ಯ ಜನರಲ್ಲಿಯವನೊಬ್ಬ ನನ್ನನ್ನು ಕೂಡಲೇ ಕುದುರೆಯಮೇಲೆ ಹೇರಿಕೊಂಡು ನಡೆದ. ಎಲ್ಲವೂ ವಿಚಿತ್ರ ! ಅಬ್ಬಾ ! ಕುದುರೆಯ ಚಾಪಲ್ಯವೆಷ್ಟು ? ವೇಗ ತಡೆಯದೆ ಕಣ್ಣುಗಳು ಮುಚ್ಚಿದವು. ವಾಜಿಯ ವೇಗದಿಂದುಣ್ಸಿದ ಗಾಳಿಯಿಂದ ಕನೋಜ ಪಾಲಕ ಜಯಚಂದನ ಹೃದಯದಲ್ಲಿಯ ಅಸೂಯೆಯ ಕಿಡಿ ಹೊತ್ತಿ ಹೊತ್ತಿ ಹೆಗ್ಗಿಂಡವಾಗಿ ಆತನನ್ನು ಸುಡುತ್ತಿರಬೇಕೆಂಬುದು ಹಿಂದಿನಿಂದ ತಿಳಿಯಿತು. ಆ ಹೊತ್ತಿನಲ್ಲಿ ಉಳಿದ ವರಗಳ ಮುಖ ಬಾಡಿರಬೇಕು. ಅದೆಲ್ಲ ನನ್ನ ಊಹೆಗೆ ನಿಲುಕದ ಮಾತು. ನಾನು ನನಗರಿಯದೆ ನಡೆದೆ. ಹರೆಯದ ಹುಚ್ಚು ಹೊಳೆಕೊಚ್ಚಿಕೊಂಡೊಯ್ಯಲಿಲ್ಲ. ಈ ಮೊದಲೇ ಹೃದಯದಲ್ಲಿ ಸ್ಥಳಕೊಟ್ಟವರ ಬೆನ್ನು ಹತ್ತುವದು ನಲ್ಲೆಯರ ನಡತೆ. ಸ್ವಯಂವರದ ಉದ್ದೇಶಕ್ಕೆ ಗದ್ದಲ ಹಿಡಿಸಿದ ತಂದೆಯ ಬುದ್ಧಿಯಲ್ಲಿ ನಾನೊಂದು ಮಾರಕವಾಗಿರಬೇಕು. ಸ್ವಯಂವರ ಸಮಯದ ಸದುಪಯೋಗಗೊಳಿಸಿಕೊಂಡ ನಾನು ನನ್ನವರ ಸಮಾಜದವರಿಗೆ ತಾರಕವಾದೆ,

ನಾನು ಮೆಲುಕಾಡಿಸುವ ಹಗಲುಗನಸುಗಳು ಇರುಳು ಕಾಣುವ ಚಿತ್ರಗಳು ನನಸಾದವು. ಮೂಲವನ್ನು ಮರೆತು

ಮಂಗಲ ಮೊರೆತದೊಂದಿಗೆ ಸಾಗುವ ತೊರೆಯಾದರೂ ತವರಿ
ನವರ ನೆನವು ಎದೆ ತೋಯ್ಸುತ್ತಿತ್ತು. ರಾಯನ ಇನಿ ಮಾತು
ಗಳಿಂದ ನನ್ನನ್ನು ನಾನೆ ಮರೆಯುತ್ತಲಿದ್ದೆ. ಅವರನ್ನು
ಹೊಂದಿದ ಧನ್ಯತೆಯಲ್ಲಿ ಕಾಲಚಕ್ರದ ಉರುಳು ಗುರುತರಿ
ಯದೇ ಹೋಯಿತು. ರಾಜನಾದರೂ ಸದಾವಕಾಲ ಮನ
ರಂಜನೆಯಲ್ಲಿ ಮಿಾಯತೊಡಗಿದ. ರಾಜಕೀಯದತ್ತ ಮೊದಲಿ
ನಂತೆ ಲಕ್ಷ ಪೂರೈಸದಾದ. ಅದರೂ ವಂಶಕ್ಕೆ ತಕ್ಕ ಕ್ಷಾತ
ತೇಜ ಎದ್ದು ಕಾಣುತಲಿತ್ತು. ಯಾತರ ಭೀತಿಯೂ ಇರಲಿಲ್ಲ.
ಚಂದ್ರಿಕೆಯಲ್ಲಿ ಮೈಮರೆತು ವಿಹರಿಸುವ ತೇನೆಹಕ್ಕಿಗಳಾದವು
ತವರ ನೆನಪು ವಿರಳ. ಜನನಿ ಜನಕರು ಮರೆತಿರಲಿಕ್ಕಿಲ್ಲ
ವಾದರೂ ಹಾಲಿನಲ್ಲಿ ಬೆರೆತ ನೀರೆಂದು ತಿಳಿದಿರಬೇಕು. "ಬಣ್ಣ
ಗೂಡಿದ ಮೇಲೆ ಆಕೆಯ ಒಳಿತಿನ ಗೊಡವೆ ಏಕೆ?"
ಎನ್ನುತ್ತಿರಬೇಕು. ಅವರೆದೆಯ ಏರಿಳಿತ ಹೇಳಲುಬಾರದು.

ಒಂದು ರಾತ್ರಿ ಬೆಳದಿಂಗಳ ಸವಿಯುಣಿಸಿನಲ್ಲಿದ್ದಾಗ
ವಾಯುವ್ಯದ ಕ್ಷಿತಿಜದಂಚಿನಿಂದ ಕರಿಮುಗಿಲಿನ ತುಂಡೊಂದು
ಈ ಕಡೆಗೆ ಬರುವದು ಕಾಣಿಸಿತು. ಸ್ವಲ್ಪ ಸಮಯದಲ್ಲಿ ದಿಲ್ಲಿಯ
ಮೇಲೆ ಕಾಣಿಸಿಕೊಂಡು ಕರಗಿ ದಿಗಂತದಲ್ಲಿ ಮಾಯ
ವಾಯಿತು. ಮತ್ತೆ ಬೆಳದಿಂಗಳು ಮೊದಲಿನಂತೆ ಪಸರಿಸಿತು
ಬೆಳದಿಂಗಳಲ್ಲಿ ನಾವೂ ಏಕವಾದೆವು. ನಿದ್ದೆ ತಿಳಿದೆದ್ದಾಗ ಕೆಂ
ನೇಸರನ ದರ್ಶನವಾಯಿತು. ಮತ್ತೆ ಎಂದಿನಂತೆ ನಾಲ್ಕೈ
ದಿನ ಸಂದಿರಬೇಕು. ಸಮೀಪದಲ್ಲಿ ಗೊಂದಲ ಕೇಳ
ತೊಡಗಿತು. ಸೃಷ್ಟಿಯುರಸನು ರಂಜನೆಯ ಮಂಜಿನಿಂ
ಹೊರಬಂದವನಾದ. ಹಾ! ಹಾ! ಅನ್ನುವಷ್ಟರಲ್ಲಿ ಘೋ

ಮಹಮ್ಮದನ ಗುಡುಗಿನ ಧ್ವನಿಯಿಂದ ಕಿವಿಗಳು ಗಡಿಚಿಕ್ಕಿದವು. ಅವನ ಸೇನೆ ನುಚ್ಚುನೂರಾಯಿತು. ಬಂದವರು ದಿಲ್ಲೀವಲ್ಲಭನಿಂದ ಹೊಡೆತ ತಿಂದು ಕಾಲಿಗೆ ಬುದ್ಧಿ ಹೇಳಿದರು. ವಿಜಯೋನ್ಮಾದದಲ್ಲಿ ನನ್ನರಸ ತೇಲತೊಡಗಿದನು. ಮೊದಲಿನ ರಸಗಳಿಗೆ ನಮ್ಮ ಪಾಲಿಗಾದವು.

ಇಂದು ಕಂಡ ಕನಸಿನ ಅರ್ಥ ಹೊಳೆಯದಾಯಿತು. ಎಚ್ಚರದಲ್ಲಿ ಅಂದೊಮ್ಮೆ ಕಂಡಂತೆ ಅದೇ ದಿಕ್ಕಿನ ಬಾನಂಚಿನಿಂದ ಕಾರ್ಮೋಡಗಳು ಹಿಂಡುಗಟ್ಟಿ ಬರತೊಡಗಿದ್ದವು. ಕನೋಜದ ದಿಕ್ಕಿನಿಂದ ಕರಿ ಗಿರಿ ಮುಗಿಲಿನ ತುಂಡೊಂದು ಕೂಡಿಕೊಂಡು ಅವುಗಳಲ್ಲಿ ಲೀನವಾಯಿತು. ದಿಲ್ಲಿಯ ಮೇಲೆ ಸಿಡಿಲುಕಾರಿ ಕೆಲಹೊತ್ತಿನಲ್ಲಿ ಕನೋಜದಲ್ಲಿಯೂ ಕಿಡಿಗಳನ್ನು ಉಗುಳಿದವು. ಏನೇ ಇರಲಿ ಸ್ವಪ್ನಸೃಷ್ಟಿಯ ಚಲನದ-ಚಿತ್ರದ ದೃಶ್ಯವದು.

ಸೋಲು ಮುಂದಿನ ಗೆಲುವಿಗೆ ಕಾರಣವಾಗಿ ನಿಲ್ಲುವದಂತೆ. ಮೂರನೇ ವರುಷಕ್ಕೆ ಮತ್ತೆ ಘೋರಿಯು ದೊಡ್ಡ ದಳದೊಡನೆ ಸ್ಥಾನೇಶ್ವರದಲ್ಲಿ ಬೀಡು ಬಿಟ್ಟ. ಹಿಂದೆ ಅನುಭವಿಸಿದ ಸವಿಯನ್ನು ಮರೆತು ಒಂದು ಗಳಿಗೆಯಲ್ಲಿಯೇ ಕಹಿಗುಳಿಗೆ ನುಂಗುವ ಹೊತ್ತು ಬಂದಿತು. ಪೃಥ್ವೀವಲ್ಲಭನು ಮೂವತ್ತು ವೀರ ರಜಪೂತರನ್ನು ಸ್ವಾಭಿಮಾನದ ಸಂದೇಶದೊಡನೆ ಹುರುಪಗೊಟ್ಟು ಕಳೆಹಾಕಿದನು. ವೀರ ಭಟರೊಡನೆ ಸಕಲ ರಾಜಪುತ್ರರು ಕಾಳಗಕ್ಕಿಳಿದರು. ಆದರೆ ತಂದೆಯ ಸದ್ದು ಮಾತ್ರ ಕೇಳಬರಲಿಲ್ಲ. ಸಾಮಾನ್ಯ ಸ್ತ್ರೀಯಾದಲ್ಲಿ ಕುಳಿತಲ್ಲಿಯೇ ಕುಸಿದು ಕಣ್ಣುಕತ್ತಲೆಗೂಡಬೇಕಿತ್ತು. ರಜಪೂತ ಧೀರ

ರಕ್ತ ಧಮನಿಗಳಲ್ಲಿ ಬಿಸಿಯಾಗಿ ಹರಿಯುತ್ತಿತ್ತು. ಅರಮನೆಯ ಪಂಜರದ ಗಿಳಿಯಾದ ಕಾರಣ ಅಲ್ಲಿಯೇ ಹಲ್ಲು ಕಡಿದೆ. ಕೊನೆಗೆ ಕತ್ತಲೆ ಆ ವರಿಸಿತು. ದಾಸಿಯರಿಂದ ಬಂದ ಸಾಂತ್ವನ ನುಡಿಗಳನ್ನು ಕಿವಿಗಳು ಹಿಡಿಯಲಿಲ್ಲ. ಯುದ್ಧದ ಸದ್ದಡಗಿತು. 'ಅಲ್ಲಾಹೋ ಅಕಬರ' ಧ್ವನಿಯ ಕೂಗು ದಿಗಂತ ಮುಟ್ಟಿತು. ಯುದ್ಧವು ರಜಪೂತ ರಾ ಯ ನ ನ್ನು ನಾಕಲೋಕದಲ್ಲಿ ನೂಕಿತು. ತಂದೆಯ ಸೇಡಿನ ಮನವು ನೆಮ್ಮದಿ ಹೊಂದಿ ತೇನೋ! ಕನೋಜದಲ್ಲಿ ಹಾಲ್ಜೇನಿನ ಹೊಳೆ ಹರಿಯಿತೇನೋ!! ದಿಲ್ಲಿಯಲ್ಲಿ ಕಣ್ಣೀರಿನ ಕಾಲುವೆ ಸಾಗಿತ್ತು. ಆ ಉಪ್ಪುನೀರಿನಲ್ಲಿ ತಂದೆ ಜಯಚಂದನ ಸಹಾಯದ ಕೈ ಬಿಂಬಿಸಿತ್ತು.

ಒಬ್ಬರ ಕಷ್ಟವನ್ನು ಇನ್ನೊಬ್ಬರು ಸುಖವಾಗಿ ಅರಗಿಸಿ ಕೊಳ್ಳುವ ಜನರಿಗೆ ನಿಮ್ಮ ಕಾಲದಲ್ಲಿಯೂ ಕೊರತೆ ಇರಲಿ ಕ್ಕಿಲ್ಲ. ವರುಷ ಪೂರ್ತಿಗಾಣುವಲ್ಲಿ ತನಗೆ ನೆರವು ನೀಡಿದ ಜಯ ಚಂದನ ಮೇಲೇರಿ ಹೋಗಿ,ಕೊನೆಗೆ ಅವನ ರಾಜ್ಯವನ್ನೂ ಮ ಣ್ಣುಗೂಡಿಸಿದನು. ದಿಲ್ಲಿಯ ನನ್ನ ಬಾಳು ಹಾಗು ತವರಿನ ಬಾಳು ಬಯಲಿನುಡಿಯಲ್ಲಿ ಮಡುಗಿದವು.........!

ನನ್ನ ಪ್ರಳಯದೊಲವು ಇನ್ನೊಂದೆಡೆಗೆ ಹೊರಳಿದ್ದರೆ.... ಈ ದುರಂತ ಪರಿಸ್ಥಿತಿ ಒದಗುತ್ತಿತ್ತೋ ಇಲ್ಲೋ ಆರು ಬಲ್ಲರು ಇತಿಹಾಸದಲ್ಲಿ ನನ್ನೊಲವಿನ ನಿಲವು ಇಂದೂ ನೆ.... ಲೆ.... ಯಾ.......ಗಿ....ದೆ....!

ಸ್ವಾರ್ಥಾಗ್ನಿ

ಒಂದು ಊರು ಬಿಟ್ಟು ಮತ್ತೊಂದು ಊರಿಗೆ ಆವುದೋ ಕಾರಣದಿಂದ ಹೋಗಿ ನೆಲೆಸಿ ಬಾಳು ಸಾಗಿಸಿದ ಉದಾಹರಣೆಗಳಿಗೇನು ಕಡಿಮೆಯೇ ? ಹೀಗೆಯೇ ನಾಡಿನಿಂದ ನಾಡಿಗೆ ದೇಶದಿಂದದೇಶಕ್ಕೆ ವಲಸೆ ಹೋಗಿ ಬಾಳು ಮುನ್ನಡೆಯಿಸುವದು. ಬಹುಕಾಲದಿಂದ ಸಾಗಿಬಂದಿದೆ, ಸಾಗಿದೆ. ಸಾಗುತ್ತಿದೆ.

ಅದೆಷ್ಟೋ ಜನರು ವ್ಯವಹಾರಕ್ಕಾಗಿ ದೇಶದಿಂದ ದೇಶಕ್ಕೆ ಹೋಗುವಂತೆ ವ್ಯಾಪಾರಕ್ಕಾಗಿ ಇರಾಣದಿಂದ ಭಾರತಕ್ಕೆ ಬಂದು ಹೋಗುವ ಪರಿಪಾಠ ನನ್ನ ತಂದೆಯಲ್ಲಿ ಬೆಳೆದು ಬಂದಿತ್ತು ಭಾರತದ ಸಂಪರ್ಕ ಅತಿಯಾಗಿ ಕೊನೆಗೆ ದೆಹಲಿ ಅರಸನ ಒಲುಮೆಗೆ ಪಕ್ಕಾದನು. ಬಾದಶಹನ ಮೆಚ್ಚುಗೆಯಿಂದ ಕೆಲದಿನಗಳಲ್ಲಿ ನನ್ನ ತಂದೆಗೆ ಅರಮನೆಯ ಕೋಶಾಧಿಕಾರಿ ಪದವಿ ದೊರೆಯಿತು. ಕೇವಲ ವ್ಯವಹಾರ ಉದ್ದಿಮೆಗಾಗಿ ದೇಶಪರ್ಯಟನ ಮಾಡುತ್ತಿದ್ದ ನಮ್ಮ ತಂದೆ ಮೊಗಲ ಬಾದಶಹನ ಅರಮನೆಯ ಕೋಶಾಧಿಕಾರಿ ! ಕೇಳುವದೇನು ? ಎಲ್ಲಿ ನೋಡಿದಲ್ಲಿ ಘಿಯಾಸಬೇಗನ ಗುಣಾ ವರ್ಣನ ನಡೆಯಿತು.

ಆತನ ಮೋಹದ ಮುದ್ದಿ ನಾನು. ನನ್ನ ಸೊಬಗಿಗೆ ಸೀಮೆ ಇಲ್ಲದಂತಾಯಿತು. ನಾನಾದರೋ ಸ್ಫುರದ್ರೂಪಿ·

ಬೆಡಗಿನ ಬೀಡು. ಕಂಡವರೆಲ್ಲರಿಗೂ ಮುದ್ದು. ಸುಂದರಿ
ಯಾದಾಗ್ಯೂ 'ರಮಣಿಯರ ರಾಣಿ' ಎನ್ನಿಸಿದಾಗ್ಯೂ ಹಡೆ
ದವರೊಡನೆ ಚಿರಕಾಲ ಕೂಡಿರಲು ಶಕ್ಯವೆ? ತವರಿನ ಸುಖ
ಸವೆಯುವದಕ್ಕೆ ಕಾಲ ಮರ್ಯಾದೆ ಇದೆ ಸ್ತ್ರೀಯರಿಗೆ, ನಂತರ
ಅಲ್ಲಿ ಸ್ಥಾಯಿಯಾಗಲು ಉಳುಮೆ ಇಲ್ಲ. ನನಗೂ ಮನೆ
ತನಕ್ಕೂ ಸರಿಹೋಗುವ ಅಲಿಕುಲಿ ಬೇಗ ಎಂಬ ಅಶ್ವ-
ಬಲದಲ್ಲಿದ್ದ ಅಧಿಕಾರಿಗೆ ನಾನು ಸಂಗಾತಿಯಾದೆ. ತಂದೆಯ
ಮನೇಚ್ಛೆ ಕೈಗೂಡಿತು. ತವರಿನಿಂದ ಅಗಲುವಲ್ಲಿ ಕಷ್ಟಕಾಣ
ಬಂದರೂ ಎದೆ ಎಳೆತ ಹೊಸ ನಿಲಯದತ್ತ ಸೆಳೆಯುತ್ತಿತ್ತು.
ನವ ಯುವತಿಯರಿಗೆ ಇದೊಂದು ಸಂಧಿಕಾಲ, ಯುಗಾದಿ
ಯಾಗಿ ಪರಿಣಮಿಸದಿರದು. ಮೊದಲು ಗಳಿಗೆ ಏನೋ ಎನಿಸು
ತ್ತಿತ್ತು. ಆದರೆ ಇನ್ನೊಂದು ಚಣದಲ್ಲಿ ತುಂಬ ಹೊಂಬೆಳಕು
ಪಸರಿಸಿದುದು ಕಾಣಬಂತು. ಹಿಂದೆಂದೂ ಅರಿಯದ ಆವುದೊ
ನ್ನೊ ಮರೆಸುವ ಚೆಲುಮೆಯಲ್ಲಿ ತೊಯ್ದು ಕಾಲ ಕಳೆಯ
ಹತ್ತಿದೆ. ಕೆಲವು ತಿಂಗಳುಗಳಲ್ಲಿ ನನ್ನವರಿಗೆ 'ಶೇರ-ಇ-ಅಫಘಾನ
ಬಿರುದು ಬಂತು. ಬಂಗಾಲದಲ್ಲಿ ಜಹಗೀರಿಯೂ ದೊರಕಿತು.
ಆನಂತರ ನಮ್ಮ ಜಹಗೀರಿನಲ್ಲಿ ವಾಸಮಾಡಿದೆವು. ನಮ್ಮ
ಹೊಸ ಬಾಳಿನ ಸವಿ ಕನಸು ಬೆಳದಿಂಗಳಲ್ಲಿ ಪಡುವ ಸೌಖ್ಯ
ವನ್ನೂ ಮೀರಿಸಿತ್ತು.

ನಾವು ಜಹಗೀರದಾರರಾದರೂ ಬಾದಶಹನ ಮಾತ
ಮೀರುವಂತಿರಲಿಲ್ಲ. ಅದು ನನ್ನವರಿಗೆ ಇತ್ತಿತ್ತಲಾಗಿ ಸೇರ
ದಾಯಿತು. ಆಳರಸರ ಮಾತು ನಡೆಯಿಸುವದು ಕ್ರಮಪ್ರಾಪ
ವಾದವರೂ ಸ್ವಾತಂತ್ರ್ಯಕ್ಕೆ ಧಕ್ಕೆ ಎಂದು ಬಗೆದಿರಬೇಕು. ಬ

ಯನ ಮಾತು ಕಿವಿಯಲ್ಲಿ ಬೀಳದಾದವು. ನನ್ನವರ ಅವಿಧೇಯತೆ ಕಂಡು ಬಂಗಾಲದ ಸುಭೇದಾರನು ಬಾದಶಹನ ಅಣತಿ ಹೊತ್ತು ಇವರಿಗೆ ಬುದ್ಧಿ ಹೇಳಲು ಬಂದಾಗಿತ್ತು. ಆತನ ಮಾತು ಒಪ್ಪಿಗೆ ಯಾಗದಿದ್ದಲ್ಲಿ ಮೌನತಾಳಬೇಕಿತ್ತು. ಮಾಡಲಾಗದ ಕೆಲಸ ನಡೆದು ಹೋಯಿತು. ನೋಡ ನೋಡುವಷ್ಟರಲ್ಲಿ, ಸುಭೇದಾರನ ಶಿರಸ್ಸು ಭೂಮಿಗಿಳಿಯಿತು.

ಸುಭೇದಾರನ ಅಂಗರಕ್ಷಕರು ಆ ಅತ್ಯಾಚಾರ ಕಂಡು ರೊಚ್ಚಿಗೆದ್ದು ಎದೆಯುಕ್ಕುವ ಹೊತ್ತಿನಲ್ಲಿ ನನ್ನ ಮಾಂಗಲ್ಯವನ್ನು ಕತ್ತರಿಸಲು ಹಿಂದೆ ಮುಂದೆ ನೋಡಲಿಲ್ಲ. ನನ್ನವರ ಶರೀರವು ನುಚ್ಚು ನೂರಾಯಿತು. ಕಣ್ಣುಗಳು ಕತ್ತಲೆಗೂಡಿದವು. ದಿಕ್ಕೇ ತೋಚದಾಯಿತು. ನನ್ನ ಸ್ಥಿತಿಕಂಡು ಮುದ್ದು ಮಗು ಲಾಡ್ಲಿ ಅಳುವಿನಲ್ಲಿ ಮುಳುಗಿದಳು. ಮಗಳನ್ನು ಮುಂದಿಟ್ಟುಕೊಂಡು ಸಂತಾಪದ ಕುಲುಮೆಯಲ್ಲಿ ಬೇಯುತ್ತಿದೆ. ಕಾವಿನಲ್ಲಿ ಚಟಪಟಿಸುತ್ತಿರುವಾಗಲೇ ದೆಹಲಿಯಿಂದ ಕರೆ ಬಂದಿತು. ಮಗಳೊಂದಿಗೆ ದೆಹಲಿ ಸೇರಿದೆ. ಲಾಭ ಕಂಡು ಬರುವವು ಆದರಾಳಿನ ದುಃಖದಲ್ಲಿ ದೂಡಲೆಂದೋ ಏನೋ.! ಜಾಗೀರು ಬರದಿದ್ದಲ್ಲಿ........?

ಈಗ ನನ್ನ ಹೃದಯ ಮರುಭೂಮಿಯಾಗಿತ್ತು. ಪ್ರೇಮರಸದಲ್ಲಿ ಹಸಿರಾದ ಹೃದಯ ಇಂದು ಅದೇ ಧಡಪಡಿಸುವ ಬಿಸಿಲಲ್ಲಿ ತೊಳಲತೊಡಗಿತ್ತು. ಲಾಡ್ಲಿಯಲ್ಲಿ ಆಶೆಯಿರಿಸಿ ಜೀವಿಸತೊಡಗಿದೆ.

ಅಂತೂ ನಾಲ್ಕು ವರುಷ ಹಿಮ್ಮೆಟ್ಟಿ ನಿಂತ ದಿನವದು. ಸಹಜ ಶೋಬನಾವಸ್ಥೆ ಬಂದೆ. ವಿಧಿಯು ಹೊಂಚುಹಾಕಿ

ದುದು. ಹೇಗೆ ಗೊತ್ತು ? ಮನೆಯಿಂದ ಹೊರಬಂದ ವೇಳೆ
ಮುಂದಿನ ನನ್ನ ರೂಪರೇಷೆ ರೂಪಗೊಳಿಸಲಣಿಯಾದ ಗಳಿಗೆ
ಯದು. ಎಂಥ ಅಚ್ಚರಿ ! ಬಾದಶಹ ಜಾಂಗೀರನ ನೋಟ
ಈ ಕಡೆಗೆ ಹರಿಯಬೇಕೆ ? ಮೊದಲ ನೋಟದಲ್ಲಿಯೇ
ಮನವು ನನ್ನ ಕೋಮಲ ರೂಪಕ್ಕೆ ಮಾರುಹೋಗದಿರಲಿಲ್ಲ
ನಾನು ವಿಧವೆ ಹೌದು; ಈ ಮುಂಚೆ ಅಲೀಕುಲಿ ಬೇಗ
ಮೋಹದ ಮಡದಿಯಾಗಿದ್ದೆ. ನಮ್ಮಿರ್ವರ ಅನುರಾಗದ
ಕುರುಹು ಇಂದೊ ಕಣ್ಣೆದುರು ತೊನೆಯುತ್ತಿತ್ತು. ಲಾಡ್ಲಿ
ಯನ್ನು ಜೊರೆ ಅರಿಯದಿರಲಿಲ್ಲ. ಆದರೆ....? ಹೆಸರೆಂತಹದು
" ಜಹಾಂಗೀರ "–ಜಗತ್ತನ್ನು ಗೆದೆಯುವವ; ಓರ್ವ ಅಬಲೆ
ಯನ್ನು ಜಯಿಸಲಸಾಧ್ಯವೆ ? ಭೂತಕಾಲದ ಚಿತ್ರ ಜಾಗೃತ
ವಾಗಿ ಕೆಚ್ಚು ಎದೆಯಲ್ಲಿ ತುಂಬಿದ್ದರೆ....? ಚಿತ್ತೂರಿನ ಮಹಿ
ಯರ ದಾರಿ ತುಳಿದಿದ್ದರೆ.... ? ಇತಿಹಾಸದ ಪುಟದಲ್ಲಿ ನನ್ನ
ಭಾವಚಿತ್ರ ಇಂದಿನ ವರೆಗೆ ಸಿಗದೆ ಹೊಗುತ್ತಿತ್ತೆಂದು ಎಣಿಸ
ಬೇಕಾಗಿದೆ. ಆವಾಗ ನನ್ನ ಭಾವನಾ ತರಂಗಗಳು ಹೇ
ಹೊಯ್ದಾಡಿದವೋ, ಅಂತೂ ನಾನು ಕೆಲ ದಿನಗಳಲ್ಲಿ ಅರಮ
ನೆಯ ಸಾಮ್ರಾಜ್ಞಿಯಾದೆ. ಅದರಲ್ಲೂ ಪ್ರಧಾನಪದವಿ ನನ್ನ
ಪಾಲಿಗಾಯಿತು. ಕಾಲ ಲೀಲೆ ! ಇರಾಣ ತೊರೆದು ಅಕಬ
ಬಾದಶಹನ, ಅಲ್ಲ ! ನನ್ನ ಮಾವನ ಒಲುಮೆಯಿಂದ ಕೋಶಾ
ಧಿಕಾರಿ ನನ್ನ ಹೆತ್ತಾತನಾದರೆ, ಇಂದು ಅದೇ ಅರಮನೆಯ ಒಡ
ನಾನಾದೆ. ನನ್ನ ಜೀವನದೊಂದಿಗೆ ' ಮೆಹುರುನ್ನಿಸಾ ' ಹೆಸರು
ಬದಲಾಗಿ ' ನೂರಜಹಾನ 'ಳಾದೆ ಬಾದಶಹನ ಸಲುಮೆಯ
ಒಲುಮೆಯ ಬಲುಮೆಯಿಂದ 'ಜಗತ್ತಿನ ಜ್ಯೋತಿ' ಎನಿಸಿತು.

ಜಗತ್ತನ್ನು ಗೆಲುವವನ ಮನಸ್ಸು ನಾನೆಳೆದತ್ತ ಓಡ-ತೊಡಗಿತು. ತಂದೆ ಘಿಯಾಸ ಬೇಗರು ಪ್ರಧಾನ ಸಚಿವರಾದರು. ಸಹೋದರ ಅಸಫಖಾನನು ಹಿರಿಯ ಸರದಾರನಾದನು. ಇಷ್ಟೇ ಅಲ್ಲ, ತನ್ನ ಮಗಳನ್ನು ಖುರ್ರಮನಿಗೆ ಮದುವೆ ಮಾಡಿದನು. ನಮ್ಮ ಕರುಣೆಯ ಕರುಳೆಲ್ಲ ಒಂದೆಡೆ ಕೇಂದ್ರೀಕರಿಸಿದವು. ಕತ್ತಲಮಯ ಜೀವನದಲ್ಲಿ ಬೆಳಕು ಕಾಣಿಸಹತ್ತಿತು. ಅರಸು ಮನೆತನದ ಸಂಭ್ರಮದಲ್ಲಿ ಸಮೃದ್ಧಿ ಉಂಟಾಯಿತು. ಮಗಳನ್ನು ಕಂಡಾಗ ಒಮ್ಮೊಮ್ಮೆ ಆವುದೋ ನೆಪಗೊಂಡು ಎದೆಯಳುಕುತ್ತಿತ್ತು. ಅದೂ ಜಣ ಮಾತ್ರದ್ದು ಕೆಲ ವರುಷಗಳಲ್ಲಿ ಬಾದಶಹನ ಕೊನೆಯ ಮಗನಾದ 'ಶಹರ್ಯಾರ' ನಿಗೆ 'ಲಾಡ್ಲಿ' ಬೇಗಮಳನ್ನು ಸಂಗಾತಿಯನ್ನಾಗಿ ಮಾಡಿದೆವು. ಇರಲಿ, ರಾಜ್ಯಸೂತ್ರದಲ್ಲಿ ಹಿನ್ನೆಲೆಯಾಗಿ ನಮ್ಮ ಕೈಯಾಡುತ್ತಿತ್ತು. ಎಲ್ಲೆಲ್ಲಿಯೂ ಸಂತೋಷವೇ ಸಂತೋಷ !

ಎಂತಹ ವಿಲಾಸದಲ್ಲಿ ಮುಳುಗಿದರೂ ಕೂಡ ಪ್ರಜೆಗಳ ದೂರಿಗೆ ನನ್ನಿನಿಯನ ಕಿವಿ ತೆರೆದಿರುತ್ತಿದ್ದವು. ಎಂದಿನಿಂದಲೂ ನ್ಯಾಯಪಕ್ಷಪಾತಿ. ಸರಿಯಾಗಿ ನ್ಯಾಯ ನೀಡುವವರಲ್ಲಿ ಹೆಸರುವಾಸಿ ಜಹಾಂಗೀರ ಬಾದಶಹ. ತಿಳಿಯದೆ ನನ್ನ ಕೈಯಿಂದ ಆಗಸನು ಸಾವನ್ನು ಹೊಂದಿದ ಸಂಗತಿ ಹಾಗೂ ಆತನ ಹೆಂಡತಿಗೆ ನನ್ನರಸ ಕೊಟ್ಟ ನಿಷ್ಠುರ ನ್ಯಾಯ ಇಂದೂ ಧ್ವನಿಸುತ್ತಿದೆ. ಓಲಗದ ದ್ವಾರದಲ್ಲಿ ತೂಗು ಹಾಕಿದ ಗಂಟೆಯ ನಾದ ಈಗ್ಲೂ ಅಲೆ ಅಲೆಯಾಗಿ ಹವೆಯಲ್ಲಿ ತೇಲುತ್ತಿದೆ.

ಇಂತಹ ನ್ಯಾಯ ಧುರಂಧರನನ್ನು ಹೊಂದಿ ಕಂಡುದುದು

ಇನ್ನೂ ಉಂಟು. ಸ್ವಾರ್ಥ ಬಿಟ್ಟಿರುವದು ಕಠಿಣ ಕಾಣಿಸುತ್ತಿ
ಸನ್ನೊಡೆಯನು ತನ್ನ ತಂದೆ ಅಕಬರನ ವಿರುದ್ಧ ದೊ
ಎಬ್ಬಿಸಿದುದೂ ಅಬುಲಫಜಲನ ಕೊಲೆಗೈದುದೂ ಸ್ವಾರ್ಥಕ್ಕ
ಮತ್ತೇನು ? ಕೊನೆಗೆ ಕಳವಳಗೊಂಡು ಕ್ಷಮೆಯಾಚಿಸಿದ
ನಾಯಿತು. ? ತಪ್ಪು ಮಾಡಿದ್ದು ಮಾಜುವಂತಿಲ್ಲ. ಕಕ್ಕು
ಯಿಂದ ಅಕಬರ ದೊರೆಯು ಕ್ಷಮೆ ನೀಡಿ ತಂದೆತನ ಕಾಂ
ಮಡಿದನು. ತನ್ನಂತೆಯೇ ಮಗು ಖುಸ್ರುವು ಲಾಹೋರಿ
ದಂಗೆ ಹೂಡಿದಾಗ ಉಗ್ರೋಪಾಯಗಳಿಂದ ಬಂಡು ಅಡ
ಕೊನೆಗೆ ವಾತ್ಸಲ್ಯಕ್ಕೆ ಕಿಡಿಯಿಟ್ಟು, ಖುಸ್ರುವಿನ ಕಣ್ಣು ಕೀ
ಸೆರೆಮನೆಯಲ್ಲಿರಿಸಿದುದು ಹೃದಯವುಳ್ಳವರಿಗೆ ಖೇದ ಮ
ದಿರದು. ಅದೆಂತಹ ರಾಜ್ಯ ಲಾಲಸೆ ? ಕರುಳಿಗೆ ಚೂರಿ ಇ
ರಾಜ್ಯಸೂತ್ರ ಹಿಡಿದಲ್ಲಿ ನ್ಯಾಯವಾದೀತೆ ? ಪ್ರಜಗಳಿಗೆ ನ್ಯಾ
ಸಿಕ್ಕುತ್ತಿತ್ತು. ಅವರ ಒಲುಮೆ ನನಗೆ ಸಾಕೆನ್ನುವಷ್ಟು ದ
ತ್ತಿತ್ತು. 'ಜಗತ್ತಿನ ಜ್ಯೋತಿ' ಯ ಎದುರು ಅವರು
ಸ್ಸುಖಿಯಾಗಿ, ಹಾಯಾಗಿ, ಶುಭವಾಗಿ ನಲಿಯುತ್ತಿದ್ದ
ನನಗೇಕೋ ಅವರಲ್ಲಿ ಕಪ್ಪು ಕಲೆ ಕಾಣಿಸುತ್ತಿತ್ತು. ಮೊ
ಮೊದಲು ರಾಣಿಯರಾಗಿ ನಲಿಸಿ ತಣಿಸಿದವರಿಗೂ ನಾ
ಹೆಚ್ಚು ಕಾಣಿಸುತ್ತಲಿದ್ದೆ. ನಮ್ಮೆಲ್ಲರ ಮೇಲೆ ಸಮದೃ
ಹರಿಸಿದಲ್ಲಿ ನ್ಯಾಯದ ತೂಕ ಸಮತೋಲವಾಗುತ್ತಿತ್ತು. ಆ
ಚಲ್ಲಿಕೆಯಡಗಿ ಕಾಣೆಯಾಯಿತೆಂದರೆ ಸರಿ ಎನ್ನಿಸಿತು ಅರವ
ಯಲ್ಲಿ ಸ್ವಾರ್ಥ ಸುಳಿದಾಡುತ್ತಿರುವದು ತೋರುತ್ತಿತ್ತು.

ಹೃದಯ ಕೊಟ್ಟವರಿಗೆ ಮನಸುಗೊಡುವದು ಸ
ತಾನೆ! ನಾನವರನ್ನು ತುಂಬ ಪ್ರೀತಿಸುತ್ತಿದ್ದೆ. ನನ್ನವರ

ಮೇಲೆ ಬೇರೆ ಹೇಳಬೇಕೆ ? ಅವ್ಯಕ್ತ ಭಾವವೊಂದು ಏನೋ ಸಾಧಿಸಲು ಪ್ರೇರೇಪಿಸುತ್ತಿತ್ತು. ಅದನ್ನು ಮನ ಒಪ್ಪುತ್ತಿತ್ತು. ಬಾದಶಹರ ಮುಂದೆ ಬಾಯ್ದೆರೆದು ಹೇಳಲು ಸಂಕೋಚ ಸುಳಿಯಲಿಲ್ಲ. ಸಲುಗೆಯ ಸಲ್ಲಾಪ ಏನನ್ನೂ .ಕೇಳಿಸುತ್ತಿತ್ತು ಅವರ ಪ್ರೇಮದ ಲಾಭ ಕೊಂಡಲು ಸಂಚು ನಡೆಯಿಸಿದೆ. ಬಾದಶಹನಿಗೆ ಜಿಗುಪ್ಸೆಯಾಗದಂತೆ ಕೆಲಸ ನಡೆಸಬೇಕಿತ್ತು. ಲಾಡ್ಲಿ ಬೇಗಂ........ ರಾಣಿ........! ಶಹರ್ಯಾರನು........ ಬಾದಶಹ....!, ಈ ಸ್ವಾರ್ಥದ ಹುಚ್ಚು ವಿಚಾರ ಸುಳಿಯ ತೊಡಗಿತು. ಸಾಧನೆಗಾಗಿ ತಂತ್ರ ಬೆಳೆಸಬೇಕಾಯಿತು.

ಒಡಹುಟ್ಟಿದ 'ಅಸಫಖಾನ' ತಂಗಿಯ ಮೇಲೆ ಎಲ್ಲಿ ಮೀರಿದ ವಾತ್ಸಲ್ಯ. ನನ್ನ ಮೆಚ್ಚುಗೆಯಿಂದ ಅವನು ಸುಭೇದಾರನಾದುದು. ಆದರೆ.... ? ಮಗು ಮಮತಾಜಳ ಒಳಿತು ಮುಂದೆಯಾಗಿ ನನ್ನೆಡೆಗೆ ದೃಷ್ಟಿ ಮಸುಕಾಗಹತ್ತಿತು. ನನ್ನ ಕರುಳು ನನಗೊಪ್ಪಿದ ನಾದ ಮಿಡಿದರೆ, ಅಣ್ಣನ ತಾಳ ತನ್ನ ಗುಂಜಾರವಕ್ಕೆ ಮೇಳಗೂಡುತ್ತಿತ್ತು. ಎರಡರ ಮಧ್ಯ ಆಪಲಯ ಅಪಸ್ವರ ಕೇಳುವವರಿಗೆ ಕೇಳುತ್ತಿತ್ತು. ಓಲಗದ ಕೆಲ ಜನ ಸಹೃದಯರು ಕಿವಿಗಳ ಮೇಲೆ ತೆರೆ ಎಳೆದಿರಬೇಕು. ತಾಳ ಮೇಳ ತಪ್ಪಿದಸ್ವರ ಹೊರಟರೂ ನಮ್ಮ ಮಿಡಿತನಡೆದಿತ್ತು. ಇತಿ ಹಾಸದ ಪುಟ ಹೆಚ್ಚಲು ಸಂಗತಿ ಬೇಕಿತ್ತೇನೋ !

ಅರಮನೆಯಲ್ಲಿ ವಿಷಪೂರಿತ ಸ್ವಾರ್ಥದ ಗಾಳಿ ಬೀಸಹತ್ತಿತು. ಈ ಹೊತ್ತಿನಲ್ಲಿ ಬಾದಶಹರಿಗೆ ಜ್ವರ ಬಿಟ್ಟನು. ನವೆಯಹತ್ತಿದರು. ಹವೆಯ ಬದಲಾವಣೆ ಅವಶ್ಯವಾಯಿತು. ನಾನೂ ಹಿಂಬಾಲಿಸಿ ಕಾಶ್ಮೀರಕ್ಕೆ ತೆರಳಿದೆನು. ದಕ್ಷತೆಯಿಂದ

ಸೇವೆ ನಿರ್ವಹಿಸುತ್ತಲಿದ್ದೆ. ದಿನಗಳೆದಂತೆ ಬೇನೆ ಹೆಚ
ಸಾಗಿತು. ನನ್ನ ಹೃದಯದಲ್ಲಿ ಅಮಂಗಲ ವಿಚಾರಗಳ
ಗಳ ಅಬ್ಬರಕ್ಕೆ ಆಳತೆ ಇಲ್ಲದಾಯಿತು. ಮನಸ್ಸು ಏನೇ
ಗೇನಿಸುತ್ತಿತ್ತು. ಭಯಾನಕ ದೃಶ್ಯ ಕಾಣುತ್ತಲೂ ಇ
ಮೈನಡುಗಿಟ್ಟಿತು. ನನ್ನ ಸೌಂದರ್ಯ ಕುರೂಪ ತಾಳು
ವಂತೆ ಭಾಸವಾಯಿತು. ಕಲ್ಪನಾ ಗೋಪುರಗಳು ಪುಡಿ
ಯಾಗಿ ಧೂಳಿ ಗೂಡುವ ನೋಟ ಕಾಣುತ್ತಿತ್ತು. ಅವು
ನೆರೆದ ಸುಂದರ ರಂಗ ಕಗ್ಗವಿಯಲ್ಲಿ ಕರಗಿ ಸಮಾಧಿ ಹೊ
ವದು ನಡೆದಿತ್ತು. ಎದೆ ಹೊಡೆತ ಮುಮ್ಮಡಿಸಿತು.

ಬಾದಶಹರ ಹರಿದಾಡುವ ರಕ್ತ ವಿಶ್ರಾಂತಿ ಪಡೆಯಿ
ಉಸಿರು ಗಾಳಿ ಗೂಡಿ ಸ್ವಚ್ಛಂದ ವೃತ್ತಿ ವಹಿಸಿತು.
ದ್ದುದು ಬೀದಿ ಯಲ್ಲಿ ನೆಲದಿಂದ ಲಾವಾರಸ, ಮೇಲಿ
ಮುಗಿಲು ಹರಿದು ಏಕಕಾಲಕ್ಕೆ ದಾಳಿಯಿಟ್ಟವು.

ಬಾದಶಹರೊಂದಿಗೆ ಕಾಶ್ಮೀರಕ್ಕೆ ಹೋದವಳು
ಬರದೊಂದಿಗೆ ದೆಹಲಿ ಸೇರಬೇಕಾಯಿತು........! ಕರ್ಮವಿ
ವಾಗಿತ್ತು........! ತಿಂಡು ತೇಗಬೇಕಾಗಿತ್ತು....! ಈ ಸಂ
ತಮಗೆ ಅನುಕೂಲವೆಂಬಂತೆ ಮಕ್ಕಳು ವರ್ತಿಸಿದರು.
ದಾಸೆ ಪೂರೈಸಿಕೊಳ್ಳಲು ಈ ಸಂಧಿಯ ಉಪಯೋಗವ
ಕೊಂಡರು. ಆಗುವದನ್ನು ತಡೆಯಬೇಕಾರು....? ಶಹರ್ಯಾ
ಲಾಹೋರಿನಲ್ಲಿ ದೊರೆ ಎಂದು ಸಾರಿಕೊಂಡನು. ಇ
ಸಹಿಸದ ಅಸಫಖಾನನು ರೊಚ್ಚಿಗೆದ್ದು ಖುರ್ರಮ (ಶ
ಜಹಾನ) ನನ್ನು ದಕ್ಷಿಣದಿಂದ ಬರಮಾಡಿಕೊಂಡು ಮ
ಬತಖಾನನ ಸಹಾಯದಿಂದ ಶಹರ್ಯಾರನನ್ನು ಸೋಲಿ

ಕೊ....ಳ್ಳಿ....ಸಿ....ದ........!........ಲಾ....ಡ್ಲಿ ? ....
ನನ್ನಂತೆಯಾದವಳು. ಹಿಂದಿನ ನೆನಪು.... ಶೇರ-ಅಫಘಾನ....
ಅಂದಿನ ಮಾಯದ ಗಾಯ....! ಜಗತ್ತನ್ನು ಗೆಲ್ಲುವ ಪೊರೆ....
ಒಂದು ತೆರನಾದ ಸಂಕಷ್ಟ, ಸಂತಾಪ. ಒಂದು ಸಲ ಉಂಡರೆ
ನೀಗಲಿಲ್ಲವೇ....? ನನ್ನನ್ನ ರಕ್ಷಿಸಿದ ಶೇರ - ಅಫಘಾನನ
ಸಾವು....! ರುಕ್ಷಜೀವನದಲ್ಲಿ ಹೃದಯ ತೊಯ್ಸಿದ ಬಾದಶಹನ
ಮರಣ....!!! ಸುರಿಯಾಗಿ ಹೃದಯ ಹಿಂಡಿದವು. ಮಗಳ
ಪರಿಸ್ಥಿತಿ ಕಂಡು ಕಣ್ಣೀರು ಕೋಡಿಯಾದವು. ಅಲ್ಲಾನ ಆಟ....!
ಸೌಖ್ಯ ಕಾಣಿಸುತ್ತಿರುವದನ್ನು ಹಿಡಿಯಲು ಬಾಯಿಗೆ ಗೋಳಿನ
ತುತ್ತು ! ಪರಿಳಿತದಲ್ಲಿ ನಮ್ಮ ತೊಳಲಾಟ....! ಇದು ಆತನಿಗೆ
ಆನಂದದ ನೋಟವಿರಬೇಕು ! ಭವಿಷ್ಯದಲ್ಲಿ ನನ್ನ ಅಣ್ಣನ
ಮಗಳ ಗೋರಿಯ ಮೇಲೆ ಕಳೆಯ ಬೀಡು ಮೈದಾಳಿ, ನಿರಿ
ಯಾಗಿ ರಾಜಿಸಬೇಕೆಂದು ಅಲ್ಲಾನ ಸಂಕಲ್ಪವಿದ್ದಿರಬೇಕು.

ನನ್ನ ಜೀವನ ಬಂಜರು ಭೂಮಿಯಾಯಿತು. ಹೊಟ್ಟೆ
ಯ ಹಸಿವು ತನ್ನ ಕೆಲಸ ತಾನು ನೀಗಿಸುತ್ತ ಮತ್ತೂ ಹದಿ-
ನೇಳು ವರುಷ ಹಸಿಯಾರಿದ ಜೀವನವನ್ನು ಮುಂದೂಡಿತು.
ನನ್ನ ಭಾವನೆ ಮೊದಲು ಮಾಡಿ ಅರಮನೆಯ ತುಂಬ
ಕಂಡು ಅನುಭವಿಸಿದುದು ಆ ಒಂದು ಕಪ್ಪು ಕಳೆ ! ಸ್ವಾರ್ಥ....!!
ಜಗತ್ತಿನ ಜ್ಯೋತಿಯ ಕಣ್ಣಲ್ಲಿ ಕಂಡ ಕಪ್ಪೆಂದು ಕಾಣಗೆ
ಡದಾಗದವರು ಭಾವಿಸಿದರೂ ಭಾವಿಸಲಿ.

ಮಾನವ ವರ್ಚಸ್ಸು

ಸಂಜೆಯ ಎಂಟು ಗಂಟೆ ಸಂದಿರಬೇಕು. ನಮ್ಮ ' ಕ
ಕಣ್ಣೆರೆದು ಎಚ್ಚರದಿಂದ ಸಾಗಿತ್ತು. ನಮ್ಮ ಮಾವನ
ಇನ್ನೂ ನಾಲ್ಕು ಐದು ಮೈಲಿರಬಹುದು. " ಇದು ಕ್ಷ
ಕಾಲ. ಕಳ್ಳಕಾಕರು ಆ ಹಳ್ಳದ ನೆರೆ ವಾಸಿಸುವ
ನಾನು ಕೇಳಿದ್ದೇನೆ. ನೀವು ಎಚ್ಚರದಿಂದ ಸಾಗಿರಿ. "
ಯವರು ಬರುವಮುಂದೆ ಎಚ್ಚರಿಸಿದಂತೆ ಬಂಗಾರ ಆಭ
ಗಳನ್ನು ತೆಗೆದು ಸೀಟಿನ ಬುಡದಲ್ಲಿಡಲು ನನ್ನ ತಾ
ತಿಳಿಸಿದೆ, ಅಷ್ಟರಲ್ಲಿ ಹಳ್ಳವೂ ಬಂದಿತು. ದಾರಿಯು
ಮುರಿಗೆಯುತ್ತಿದ್ದು ತೀರ ಮುಂದಿನ ಮಾರ್ಗ ಕಾಣಿಸಿಕೆ
ತ್ತಿರಲಿಲ್ಲ. ವೇಗವಾಗಿ ಕಾರು ಓಡುತ್ತಿತ್ತು. ಇಕ್ಕೆಲದಲ್ಲಿ ಉ
ಮರಗಳ ಗುಂಪು. ಜನರ ಸುಳಿವು ಇದ್ದಿರಲಿಲ್ಲ. ಓಡು
ವಷ್ಟರಲ್ಲಿ ಕಾರು ನಿಧಾನಿಸಿತು. ನಿಧಾನವೇಕೆ, ನಿಂತೇ ಬಿಟ್ಟಿ
ದಾರಿಗಡ್ಡವಾಗಿ ನಾಲ್ಕಾರು ಹಗ್ಗಗಳು ಬಿಗಿಯಲ್ಪಟ್ಟಿರ
ನಮ್ಮೆದೆ ಯಂತ್ರದಂತೆ ಹೊಡೆದುಕೊಳ್ಳತೊಡಗಿತು.
ಹಿಂದಿರುಗಿಸಲು ಸೂಚನೆಕೊಟ್ಟೆ. ಹಿಂಬದಿ ದಾರಿಗೂ ವ
ನಂತೆ ಹಗ್ಗ ಕಟ್ಟಿದ್ದರು. ಅನಿವಾರ್ಯವಾಗಿ ನಿಲ್ಲಬೇಕಾಯಿ
ಅಷ್ಟರಲ್ಲಿ ಗಿಡದ ಗುಂಪಿನೊಳಗಿಂದ ನಾಲ್ಕಾರು ಜ
ಆಯುಧ ಪಾಣಿಗಳಾಗಿ ಬಂದರು. ನಮಗೆ ಕೆಳಗಿಳಿಯ
ಹೇಳಿ ಕೊಂಡರು. ನಡಗು ಹಿಡಿದಿದ್ದಿತು. ಪಿಟ್ಟೆನ್ನದೆ ನ

ಹಾಗೂ ನನ್ನ ತಾಯಿ ಸಣ್ಣ ತಮ್ಮನನ್ನೆತ್ತಿಕೊಂಡು ಇಳಿದೆವು. ಡ್ರಾಯವ್ಹರನೂ ಇಳಿದನು. ಅವರು ನಮ್ಮನ್ನು ಏನೊಂದು ವಿಚಾರಿಸದೆ ಮೇಲೇರಿದರು. ಆಗ ನಿಲ್ಲಲಿಕ್ಕಾಗದೆ ಕುಸಿದು ಕುಳಿತೆವು. ನಮ್ಮ ಚಿತ್ತವು ಜೆಲೆಬಾಳುವ ವಸ್ತುವಿನತ್ತ-ಹೋಗಿದ್ದಿತು. ಅವರು ತಪಾಸಿಸಿ ಕೆಳಗಿಳಿದರು. ಎಲ್ಲಿಗೆ ಹೋಗುವವದೆಂದು ಪ್ರಶ್ನಿಸಿದರು. ನಾವು ಅಂಜುವ ಸ್ವರದಲ್ಲಿ ಭೀಮನಗೌಡರ ಮನೆಗೆಂದೆವು. ಆಗಲಿ ಎನ್ನುತ್ತ ಹಗ್ಗ ಸಡಲಿಸಿ ಮಾರ್ಗ ಮಾಡಿಕೊಟ್ಟರು. ನಾವು ಮನದಲ್ಲಿಯೇ ಅವರಿಗೆ ಧನ್ಯವಾದಗಳನ್ನರ್ಪಿಸುತ್ತ ಕಾರು ಏರಿದೆವು. ಮೊದಲಿನಂತೆ ಓಟ ಸುರುವಾಯಿತು. ನನಗೆ ಎಲ್ಲವೂ ವಿಚಿತ್ರವಾಗಿ ಕಾಣಿಸಿತು. ಇವರೆಂಥ ಕಳ್ಳರು ! ಕಳ್ಳರಾದರೆ ಏನೊಂದು ಕೇಳಿ ತೆಗೆದು ಕೊಳ್ಳದೆ ಸುರಕ್ಷಿತ ಬಿಡುವರೇ ? ಕಳ್ಳರಾಗದಿದ್ದಲ್ಲಿ ಇಕ್ಕೆಲಕ್ಕೂ ಹಗ್ಗ ಬಂಧಿಸಿ ಸಮಯವನ್ನೇಕೆ ತೆಗೆದುಕೊಳ್ಳುತ್ತಿದ್ದರು ? ಇಲ್ಲವೆ ನಮ್ಮ ಪರಿಚಯಗಾರರಿರಬೇಕೆ ? ಹಾಗಿದ್ದಲ್ಲಿ ನಮಗೆ ಅವರ ಧ್ವನಿ ಕೂಡ ಗುರುತು ಹತ್ತಲಿಲ್ಲವಲ್ಲ ! ಇವರು ಕಳ್ಳರೇ ನಿಜ. ಆದರೆ ನಮ್ಮ ಮಾವನ ವರ್ಚಸ್ಸು ಕಂಡು ಬಿಟ್ಟಿರಲು ಸಾಕೆಂದು ಬಗೆದೆ. ಏನೇ ಆಗಲಿ ದೇವರು ಕುತ್ತಿನಿಂದ ಪಾರುಮಾಡಿದನೆಂದುಕೊಂಡೆ. ನನ್ನ ತಾಯಿಯು ಮೌನ ಧಾರಣ ಮಾಡಿ ಕುಳಿತಿದ್ದಳು. ಕಳವು, ಕೊಲೆ, ಮೋಸ ಇವುದನ್ನೂ ಅರಿಯದ ನನ್ನ ತಮ್ಮ ರಾಮು ನಿದ್ರೆಯಿಂದ ಹೊರತಾಗಿರಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಊರು ತಲುಪಿದೆವು.

“ ಅಣ್ಣಾ ನಮ್ಮ ಪುಣ್ಯವಿದ್ದುದರಿಂದ ಇಂದು ನಿಮ್ಮನ್ನು ಕಂಡೆವು ಇಲ್ಲದಿದ್ದರೆ....” “ ಅದೇಕಮ್ಮಾ ಗೌರಾ,

ಏನಾಯಿತು ” ಎಂದರು ಮಾವನವರು. ಜಾಚೂಬಿಡ
ಒದಗಿದ ಘಟನೆ ವಿವರಿಸಿದಳು. ಮಾವನು ಮುಗುಳ್ನಗೆ ಬೀರಿದ
ದನ್ನು ಕಂಡು ಅಚ್ಚರಿಪಟ್ಟೆ. “ ಮಾವನೇಕೆ ಬರಲಿಲ್ಲ ”
ಎಂದರು, ಮಾವನವರು. “ ಮನೆಯಕಡೆಗೆ ಒಬ್ಬರಾದರು
ಬೇಕಲ್ಲ ಅಕ್ಕಿಕಾಳಿನದಿನ ಬರುವರೆ ”ಂದು ಮಾತು ಕೊ
ಗಾಣಿಸಿದಳು.

ಆ ದಿನ ರಾತ್ರಿ ಅದೇ ದೃಶ್ಯ ಕಾಣಿಸಿ ಹೆದರಿಸಿತು. ಬೆ
ಗಿನ ನಾಲ್ಕು ಗಂಟೆಗೆ ಎಚ್ಚತ್ತು ಲಾಂದ್ರ ಹೊತ್ತಿಸಿ ಸಂಗ
ತಂದ ‘ ಪೇಪರ ’ ಬಿಚ್ಚಿದೆ. ಭಾರತದ “ ಆಹಾರ ಧಾನ್ಯ
ಕೊರತೆಯ ಪ್ರಶ್ನೆ ” ಓದಿ ಪುಟ ಮಗುಚಿದೆ. ಶ್ರೀಮಂತಿಕೆಯ
ವೃದ್ಧಿ. ಬಡವರ ಅನೇಕ ಕನಿಕರ ನೋಟ. ಸ್ಮೃತಿಯೆದುರ
ಬಂದು ಜಾರಿದವು. ಮೂಡಲದಲ್ಲಿ ಬೆಳಕು ಹರಿಯಿತು
ಮುಂಜಾವಿನ ಅಲೆದಾಟ ಏನೆಲ್ಲ ಕಾರ್ಯ ಮುಗಿಸಿದೆ. ಮಾವನ
ವರು ಕರೆದು “ ಇಗೋ ಇನ್ನು ಎಂಟು ದಿನಗಳುಳಿದವ
ಲಗ್ನದ ಮಿತಿ ಸಂದಲು. ಅಷ್ಟರಲ್ಲಿ ಎಲ್ಲವೂ ತಯಾರಿ
ಬೇಕು. ಅದಕ್ಕಾಗಿಯೇ ಮುಂಚಿತ ನಿನ್ನನ್ನು ಬರಮಾಡಿ
ಕೊಂಡದ್ದು. ಆಚೆಯ ಕೊಠಡಿಯಲ್ಲಿ ಯಾವತ್ತೂ ಸಾಮಗ್ರಿ
ಗಳುಂಟು. ಲಗ್ನದ ಸಿದ್ಧತೆ ಸರಿಯಾಗಿ ಆಗಬೇಕು. ” ಎಂದ
ಆಜ್ಞಾಪಿಸಿದರು. ಆಜ್ಞಾಧಾರಿಯಾಗಿ ಕಾರ್ಯದಲ್ಲಿ ತೊಡಗಿದೆ
ಅನೇಕರು ಅಲ್ಲಿ ದಿನಾಲು ಬಂದು ದುಡಿಯುತ್ತಿದ್ದರೂ ದಿನಾಲು
ಮನೆಯಂಗಳದಲ್ಲಿ ಕಟ್ಟಿಗೆ ಸೀಳುವ ‘ ಎಲ್ಲಿ ’ ನನ್ನು ಕಂಡ
ಒಂದುತರದ ಪ್ರೀತಿ ನನ್ನಲ್ಲಿ ಉಂಟಾಗುತ್ತಿತ್ತು. ಸ್ತ್ರೀಯಲ್ಲಿ
ಸರಕು ಅರಿವೆ, ಬಡಕಲು ಶರೀರ. ಕಂಡವರಲ್ಲಿ ಕರುಣೆ

ತಾರದಿರುತ್ತಿರಲಿಲ್ಲ. ತನ್ನ ಕೊಡಲಿಯಿಂದ ಮುಂಜಾವಿನಿಂದ ಮಧ್ಯಾಹ್ನದವರೆಗೆ ಕಟ್ಟಿಗೆಸೀಳಿ ನಂತರ ಊಟ! ಅದೆಂಥ ಊಟ! ತಂಗಳ ರೊಟ್ಟಿಯ ಚೂರುಗಳಾದರೆ ತೀರಿತು. ಅದಷ್ಟು ಉಂಡು ಮತ್ತೆ ತನ್ನ ಕಾರ್ಯಕ್ಕೆ ತೊಡಗುತ್ತಿದ್ದನು. ಯಾರಾದರೂ ಸೇದಿ ಬೀಡಿ ಕೊಟ್ಟರೆ ಆನಂದದಿಂದ ಸೇದುತ್ತಿದ್ದ. ಕೆಲಸದಲ್ಲಿದ್ದರೂ ಬಂದವರಿಗೆ ಸಲಾಮು ಹೊಡೆಯುವದು ಮರೆಯುತ್ತಿರಲಿಲ್ಲ.

ಅವನ ಸಂಬಳ ಕೇಳಲು- "ನನ್ನ ತಂದೆ ನನಗೇತರ ಪಗಾರ, ಅಂತೂ ನನ್ನ ಮುಡಿಯಾಕ ಗೌಡ್ರ ಹಚ್ಚಿದ್ದಾರ, ನನಗೊಂದಾನಂದ. ಅವರಲ್ಲಿ ಎಷ್ಟುಮಂದಿ ದುಡಿಯುವರು. ಎಂದಿನಿಂದ ಚಾಕರಿಮಾಡಕೋತ ಬಂದೀನಂತರ, ನನ್ನ ಕರಕೊಂಡಾರ" ಅವನ ಆದರ ಭಾವನೆ, ಸರಳ ಜೀವನ ಕಂಡು ಬೆರಗಾದೆನು. ಫಲಾಪೇಕ್ಷೆ ಇಲ್ಲದೆ ಶ್ರಮ ತೆತ್ತುವದು ದೊರೆತ ತಂಗಳ ಅನ್ನದಿಂದ ತೃಪ್ತಿ. ಆತನೊಬ್ಬ ನಿಷ್ಕಾಮ ಕರ್ಮಯೋಗಿ. ಕತ್ತಲಾಗುತ್ತ ಬಂದರೂ ಇನ್ನೂ ದುಡಿಯುವ ದನ್ನು ಕಂಡು ಮನ ಮರುಗಿತು. ಬೈಗಿನ ಹೊತ್ತು ಸಮೀಪಿಸಿತು. ಹೋಳಾದ ಕಟ್ಟಿಗೆಗಳನ್ನು ವ್ಯವಸ್ಥೆಗೊಳಿಸಿದ ಎಲ್ಲಿಗೊಂದು ಸೇದಲು ಬಿಡಿ ಕೊಟ್ಟೆ. ಆವನು ಆನಂದಹೊಂದಿ 'ರಾಮರಾಂ' ಮಾಡಿ ತನ್ನ ಊರ ಜೋರಗಿನ ಗುಡಿಸಲಿಗೆ ತೆರಳಿದನು.

ಕೈಯಲ್ಲಿ ಬಹಳ ಕೆಲಸವಿತ್ತು. ನಾಳೆ ಎಲ್ಲ ಬೀಗರೂ ಬರುವವರಿದ್ದುದರಿಂದ ಅವರವರಿಗೆ ತಂಗಲು ಮನೆಗಳ ವ್ಯವಸ್ಥೆ ಗೊಳಿಸುವದಿದ್ದಿತು. ಉಪಹಾರ ತೀರಿಸಿಕೊಂಡು ಬೇಗ

ರಿಳಿಯುವ ಮನೆಗಳಲ್ಲಿ ಹಾಸಿಗೆ ಇರಿಸಲಾಯಿತು. ಮನೆ
ಮುಂದೆ ಕಾವಣ ಅಂದವಾಗಬೇಕಾಗಿತ್ತು. ಎಲ್ಲನ ಜೊ
ಇನ್ನಿತರರು ತೊಪ್ಪಲು ತಂದಿರಿಸಿದರು. ಮಂಟಪವೂ ಆಯಿತ
ತಳಿರು ತೋರಣ ಅಲ್ಲದೆ ಗಾಜಿನ ಒಡವೆಗಳನ್ನು ತೂ
ಬಿಡಲಾಯಿತು. ಮದ್ದು ತರಲು ಹೋದವನೂ ಬಂದನ
ಎಲ್ಲವನ್ನೂ ಸಜ್ಜಿರಿಸಿ ಬೀಗರ ಬೀದಿ ಕಾಯುತ್ತ ಕುಳಿತ್ತಿ
ಮೂರನೇ ದಿನ ಸಾಯಂಕಾಲ ಬೀಗರೂ ಬಂದರು. ಮುಂ
ಅಡ್ಡ ನಿಬ್ಬಣದವರ ಮೋಟರುಗಳು ಬಂದೇ ಇದ್ದವು. ಒ
ವಿಜೃಂಭಣೆಯಿಂದ ಎದುರುಗೊಂಡೆವು. ಊಟ ಉಪಚಾ
ಮುಗಿದನಂತರ ಸ್ವಲ್ಪ ಬಿಡುವು ದೊರೆಯಿತು. ಹೊರ
ನೋಡಲು ಅದು ಸಣ್ಣ ಹಳ್ಳಿಯಾದರೂ ಪಟ್ಟಣಕ್ಕೆ ಸರಿಕಾ
ಸುತ್ತಲಿತ್ತು. ಎಲ್ಲಿ ನೋಡಿದಲ್ಲಿ ಜನರ ಗದ್ದಲವೇ ಗದ್ದಲ
ಮೋಟರುಗಳೂ, ಬೈಸಿಕಲ್‌ಗಳೂ ಆ ಊರಿನವರಿಗ
ಅದೊಂದು ಹರುಷದ ದಿವಸವು.

ಮುಂಜಾನೆ ಒಂಬತ್ತು ಗಂಟೆಗೆ ಉಪಹಾರ ತೀರಿತು.
ಎಲ್ಲನಿಗೆ ಮುಟ್ಟಿಸುವದನ್ನು ಮಾತ್ರ ಮರೆಯಲಿಲ್ಲ. ಕುದುರೆ
ಗಳಿಗೆ ನೀರು ಕುಡಿಸಲು ಕೆಲವರಿಗೆ ಹೇಳಿದ್ದರೂ ಕೂಡ
ಒಂದು ಕುದುರೆ ಉಳಿದಿದ್ದಿತು. ಅದು ಎಲ್ಲನ ಪಾಲಿಗೆ ಬಂದಿತು
ಪಾಪ ! ಮೇಲೆ ಕುಳಿತು ಹೋಗುವ ಕಾಲಕ್ಕೆ ಎದುರು
ಬೇರೊಂದು ಕುದುರೆ ಬರಬೇಕೆ ? ಈತನ ಕುದುರೆ ಹೂಂಕರಿಸಿ
ಅದರ ಮೇಲೆ ಏರಿ ಹೋಯಿತಂತೆ. ಅವುಗಳ ತಿಕ್ಕಾಟದಲ್ಲಿ
ಎಲ್ಲನು ಕಲ್ಲಿನ ಮೇಲೆ ಬಿದ್ದು ಏಳದಾದ ಸುದ್ದಿ ಕೇಳಿ ಓಡಿ
ಹೋದೆನು. ನರಳುತ್ತ ಬಿದ್ದಿದ್ದ. ಏಳಲು ಬರುವಂತಿರಲಿಲ್ಲ

ಇಬ್ಬರಿಂದ ತರಿಸಿದೆ. ಜಾಣರಿಂದ ಪರೀಕ್ಷಿಸಲು ಕಾಲು ಮುರಿದಿದೆಯೆಂದು ತಿಳಿಯಿತು. ಕಾಲಿಗೆ ಪಟ್ಟಿಕಟ್ಟಿಸಿ ಗುಡಿಸಲಿನಲ್ಲಿ ಹಾಕಲಾಯಿತು. ಬೀಗರ ಊಟದ ನಂತರ ಅವನ ಹೆಂಡತಿಗೂ ಅವನಿಗೂ ಸಾಕಷ್ಟು ಉಂಡಿಗಳನ್ನು ಕಳಿಸಿದೆ. ಎಲ್ಲಿನ ಕಡೆಗೆ ನಮ್ಮ ಮಾವನ ಲಕ್ಷ್ಯವೇ ಇರಲಿಲ್ಲ. ನನಗೆ ಮಾತ್ರ ಒಂದೇ ಮಿತಿಯಲ್ಲಿ ಒಂದು ಮಗ್ಗಲು ಹರುಷ, ಇನ್ನೊಂದು ಮಗ್ಗಲಿಗೆ ಕಳವಳವಾಗಿ ಪರಿಣಮಿಸಿತು.

ಗೋಧೂಳಿ ಲಗ್ನ ಅಕ್ಷತಾರೋಪಣಕ್ಕಾಗಿ ಎಲ್ಲರೂ ಕಲೆತರು. ಕೂಡಿದ ಜನರಲ್ಲಿ ನಾಲ್ವರು ನನ್ನ ಕಂಡು ಏನನ್ನೊ ಗೊಣಗುಟ್ಟಿ ನಗಲುತೊಡಗಿದರು. ಅವರ ನಗುವಿನ ಗುಟ್ಟಿಗಾಗಿ ಕುತೂಹಲ ಕೆರಳಿತು. ತಿಳಿದುಕೊಳ್ಳಲು ಸಮಯವಿದ್ದಿಲ್ಲ. ಮಂತ್ರದ ಸಂಕೇತದಂತೆ ಎಲ್ಲರಿಂದಲೂ ಅಕ್ಕಿಕಾಳು ವಧೂವರರ ಮೇಲೆ ಬಿದ್ದವು. ತಮ್ಮ ತಮ್ಮೊಳಗೆ ಗೇಲಿಗಾಗಿ ಅಕ್ಕಿಕಾಳು ತೂರಾಟ ನಡೆದಿದ್ದಿತು. ಉಡುಗೊರೆ ಮಾಡಲಾಯಿತು. ಈ ಕಾರ್ಯ ಪೂರ್ತಿಯಾದ ನಂತರ ಎಲ್ಲರೂ ತಮ್ಮ ತಾಣ ತಲ್ಪಿದರು. ಇಂಥ ಹೊತ್ತಿನಲ್ಲಿಯೂ ಮನಸ್ಸಿಗೆ ಸೊಗಸಿರಲಿಲ್ಲ. ಎಲ್ಲನಿಗೂ ನನಗೂ ಅದಾವ ಸಂಬಧವಿರಲಿಲ್ಲವಾದರೂ ಆತನ ನೋವು ವ್ಯಥೆಮಾಡದಿರಲಿಲ್ಲ. ಆತನೆಡೆಗೆ ಚಿತ್ತ ಹೊರಳಿತು. ಆದರೂ ಹೇಗೋ ತಡೆದು ನನ್ನ ಕಂಡು ಹಾಸ್ಯ ಬೀರುವವರೆಡೆಗೆ ಹೋಗಲು ಕಾತರತೆ ಹೆಚ್ಚಿ ಅವರ ಬಳಿ ಸೇರಿದೆ. "ಓ, ಸಿಗಾರೇಟ ಕೊಟ್ಟಂತೆ ಕಾಣುವದಿಲ್ಲ"ವೆಂಬ ಮಾತಿನೊಡನೆ ಜಗುಲಿ ಏರಿದೆ. "ಸಾಕಷ್ಟಿವೆ" ಎಂದು ಕೂರಿಸಿಕೊಂಡರು. ಅವರ ಪರಿಚಯ ಚನ್ನಾಗಿ ಆಯ್ತು. ಅವರು

ಮಾತಿನ ಮಧ್ಯ ನನಗೆ ಬಲವಾಗಿ ಉಪಯೋಗಿಸುತ್ತಿದ್ದರು
ಅದರ ಕಾರಣ ಕುರಿತು ವಿಚಾರಿಸಲು “ ಅಂದಿನ ತಾವು
ಹೆದರಿರಬೇಕಲ್ಲ !” “ ಯಾವದಿನ ? ” ಎಂದು ಪ್ರಶ್ನಿಸಿ
“ ಆ ಹಳ್ಳದಲ್ಲಿ ತಮ್ಮ ಕಾರು ನಿಂತಕಾಲದಲ್ಲಿ ” ನನ
ಅಚ್ಚರಿಯಾಯಿತು. “ ನನಗೆ ತಮ್ಮ ಪರಿಚಯವಿಲ್ಲ. ಹೆದರಿಕೆ
ಅಂಟಿದುದು ಸ್ವಾಭಾವಿಕವೇನಲ್ಲ”ವೆಂದೆ. “ ಕಳ್ಳ ಪೇಟಿಯ
ಸಂಚಾಲಕರನ್ನು ಬಂಧಿಸಲು ಬಲವಾದ ಸಾಧನ ”ವೆಂದ
ಹೇಳಿದರು. “ ನಾವಾದರೂ ಮಾಲು ಸಿಕ್ಕಿತೆಂದು ಉಬ್ಬಿದ್ದೆವು
ಆದರೆ.... ತಮ್ಮ ಕಾರೆಂದು ಮೊದಲು ತಿಳಿದು ಬರಲಿಲ್ಲ. ”
“ ಇರಲಿ, ಈ ವರೆಗೆ ಸಾಕಷ್ಟು ಜನರು ಸಿಕ್ಕಿರಲು ಸಾಕು ”
ಎಂದೆ. ಅದೆಷ್ಟೋ ಜನರು ಸಿಕ್ಕಿದ್ದಾರೆ. ಆದರೆ ಯಾರನ್ನೂ
ಶಿಕ್ಷೆಗೆ ಗುರಿಪಡಿಸಿರುವದಿಲ್ಲ. ಹೇಳಿಕೊಂಡು ತೆರಳುತ್ತಾರೆ
ಇಂಥ ಪ್ರಸಂಗಗಳಲ್ಲಿ ಅವರ ಉಪಯೋಗವಾಗುತ್ತದೆ”ಎಂದರು
ಶುಷ್ಕೋಪಚಾರದ ಮಾತನಾಡಿ ನಾನು ಅಲ್ಲಿಂದಹೊರಟೆ.

ವೇಳೆ ಹೆಚ್ಚಿದ್ದರಿಂದ ಬೇಗ ಯಾವತ್ತೂ ಊ
ಮುಗಿಸಿದೆವು. ನಡುರಾತ್ರಿ ಸಮಯಕ್ಕೆ ದೇವರ ದರುಶನಕ್ಕಾ
ವಧೂವರರ ಮೆರವಣಿಗೆ ಸಾಗಿತು. ಅದೆಷ್ಟು ವೈಭವ ! ಅದೆಷ
ಜನರು !! ಮದ್ದಿನ ಕುಳ್ಳಿಗಳನ್ನು ಹಚ್ಚಲು ಆತೆಯಿಸ್ಲಿ
ನೋಡಿದತ್ತೆಲ್ಲ ಕಿಡಿಗಳ, ಕಾರಂಜಿಗಳ ಪುಟಿಯುವಿಕೆ, ಬಾ
ಗಳನ್ನು ಬಿಡುವುದಂತೂ ನಡದೇ ಇತ್ತು. ಅವು ಎಲ್ಲೆಲ್ಲಿ
ಹೋಗಿ ಬೀಳುತ್ತಿದ್ದವು. ಈ ಶೃಂಗಾರ ನೋಡಲು ಊರ ಸ್ತ್ರೀ
ಪುರುಷರೆಲ್ಲ ನೆರೆದಿದ್ದರು. ಅದೇಕೋ ನನ್ನ ನೋಟ ಮ
ದೊಂದುಕಡೆ ಮುದುಡಿನಿಂತ ಸ್ತ್ರೀಕಡೆಗೆ ಹರಿಯಿತು. ಹೌ

ಎಲ್ಲನ ಹೆಂಡತಿ. ಜನಸಂದಣಿಯಿಂದ ನುಸಳಿ ಅಲ್ಲಿಗೆ ಧಾವಿಸಿದೆ. ಎಲ್ಲನ ಬಗ್ಗೆ ಕೇಳಿದೆ. "ಇದೇ ಕಣ್ಣು ಮುಚ್ಯಾನ್ರಿ ಅದಕ್ಕಂತ ನೋಡಾಕ ಬಂದಿನ್ರಿ" ಆಕೆಯ ಮಾತಿನಿಂದ ನಿದ್ರೆ ಹೋಗಿದ್ದಾನೆಂದು ತಿಳಿದು ಹೊರಳಿದೆ. ದೇವರ ಗುಡಿ ತಲುಪಿ ಮರಳಿ ಇನ್ನೂ ಅರ್ಧ ಬೀದಿ ಗತಿಸಿರಲಿಲ್ಲ, "ಊರ ಹೊರಗಡೆ ಏತಕ್ಕೋ ಬೆಂಕಿ ಹತ್ತಿದೆ.' ಎಂದು ಗಲ್ಲು ನಡೆಯಿತು. ಒಬ್ಬರ ವೈಭವಕ್ಕೆ ಕಾರಣವಾದ ಬೆಂಕಿಯ ಕಿಡಿ ಇನ್ನೊಬ್ಬರ ಸಂಸಾರ ಸಂಹಾರಕ್ಕೆ ಕಾರಣವಾಗುತ್ತಿದೆಯಲ್ಲವೆ! ಕೆಲವರು ಹೋದರು. ತಿರುಗಿದಾತ ಹೇಳಿದ. ಶರೀರ ಕಂಪಿಸ ತೊಡಗಿತು ಕಾಲು ಕೀಳದಾದವು. ಎದೆ ಹೊಡೆತ ನಡೆಯಿತು. ಎಲ್ಲನ ಗುಡಿಸಲಿಗೆ ಬೆಂಕಿ ಬಿದ್ದಿದೆ!! ಕಣ್ಣೀರೊಡನೆ ಹೇಗೋ ಅಲ್ಲಿಗೆ ಹೋದೆ. ಜನರು ಕಿಕ್ಕಿರಿದು ನೆರೆದಿದ್ದಾರೆ. "ಪಾಪ! ಮೈ ಎಷ್ಟು ಸುಟ್ಟಿದೆ" ಎನ್ನುವ ಮಾತುಕೇಳಿ ನಾನೆಂದೂ ಅನುಭವಿಸಲಾರದ ತಾಪಸಾಯಿತು. ಜನರಲ್ಲಿ ನುಗ್ಗಿ ನೋಡುತ್ತೇನೆ, ಮೈಯೆಲ್ಲ ಸುಟ್ಟಿದೆ. ಬೇಗ ಅಗಸೆ ಯೆಣ್ಣೆ ತರಿಸಿ ತೊಡೆದೆ. ನೆರೆ ಹಳ್ಳಿಯ ವೈದ್ಯರಲ್ಲಿ ಲಗ್ನಕ್ಕಾಗಿ ಬಂದ ಕಾರಿನಲ್ಲಿಯೇ ತೆಗೆದುಕೊಂಡು ಹೋದೆ. ನಮಗೆ ಧೈರ್ಯ ಹೇಳಿದರು. ಆತನನ್ನು ವಿಚಾರಿಸಲು ತನಗೆ ಎಚ್ಚರವಾದಾಗ ಗುಡಿಸಲಿನ ಸುತ್ತು ಬೆಂಕಿ ಹಬ್ಬಿದುದನ್ನು ಕಂಡು ಸಾಯುವ ಸಂಕಟಕ್ಕಾಗಿ ಕಾಲು ಎಳೆಯುತ್ತ ಹೊರಬರುವದರಲ್ಲಿ ಸುಟ್ಟು ಕೊಂಡುದು, ತಿಳಿಯಿತು. ಅವನ ವೆಚ್ಚಕ್ಕಾಗಿ ಹಣ ಕೊಟ್ಟು ಮರಳಿದೆ.

ಲಗ್ನ ತೀರಿಸಿ ಬಂದವರೆಲ್ಲ ತೆರಳಿದರು. ನಾನಾದರೂ

ನಿಲ್ಲುವಂತಿರಲಿಲ್ಲ ನನ್ನ ಮನೆಯ ಕೆಲಸದ ಮೂಲಕ ಮಾವನಿಗೆ ಎಲ್ಲರ ಬಗ್ಗೆ ಕಾಳಜಿ ವಹಿಸಲು ಕೇಳಿಕೊಂಡು ತಾಯಿ ತಮ್ಮರೊಡನೆ ನಮ್ಮೂರು ಸೇರಿದೆ. ಮುಂದೆ ಎಲ್ಲನ ಒಳಿತು ಕೇಡಿನ ಕುರಿತು ತಿಳಿದು ಬರಲಿಲ್ಲ. ಮಾವನಿಗೆ ಪತ್ರ ಬರೆದರೂ ಉತ್ತರವಿಲ್ಲ.

ಆರು ತಿಂಗಳು ಕಳೆದಿರಬಹುದು. ಅಂದು ನಮ್ಮೂರ ಸಂತೆ. ಪಕ್ಕದ ಮಾರ್ಗದಲ್ಲಿ ಮುಪ್ಪಿನ ಮೊದಲು ಹಂತದಲ್ಲಿ ಕಾಲಿಟ್ಟ ಕೃಶ ಶರೀರದ ಸ್ತ್ರೀವ್ಯಕ್ತಿ ಬಿಕ್ಕೆಗಾಗಿ ಅಂಡಲೆಯುತ್ತ ಈ ಕಡೆಗೆ ಸಾಗಿ "ಧರ್ಮಮಾಡ್ರಿ" ಎಂದು ಕೂಗಿಕೊಂಡಿತು. ಕೆದರಿದ ತಲೆ, ಮಾಸಿದ ಛಿದ್ರ ಬಟ್ಟೆಯಿಂದ ಕೂಡಿದ ಎಲುಬಿನ ಗೂಡು ಹೇಗೋ ಚಲಿಸುತ್ತಿದ್ದಿತು ಮಾತ್ರ. ಕಳೆಯೊಣಗಿದ್ದರೂ ಆಕೃತಿಯನ್ನು ನಿರುಕಿಸಿ ನೋಡಿದೆ. ಎಲ್ಲನ ಹೆಂಡತಿ ಗಂಗಮ್ಮ ! ಸಿಡಿಲು ಕೊಂಡಂತಾಯಿತು. ಮೈ ನಡುಗಿಟ್ಟಿತು. ಎಲ್ಲ ಸತ್ತನಂತರ.... ಆಕೆಯ ಒಳಸೆಟ್ಟ ಕಣ್ಣುಗಳಿಂದ ನೀರು ಹನಿಗಳಲ್ಲಿ ಚಿಲುಮೆಯಾದವು. ಉದರುವ ನೀರು ಹನಿಗಳಲ್ಲಿ ಅಂದಿನ ಲಗ್ನದ ವೈಭವದ ಬಿಂಬ ಕಾಣಿಸಿತು. ನೋಡುತ್ತಿರುವಂತೆ ಬಾಣೊಂದು ಬೆಂಕಿಗೊಂಡು ಮೇಲೇರಿತು. ಹನಿಹನಿಗಳಲ್ಲಿ ಮಾವನ ವರ್ಚಸ್ಸು ಕಾಣಿಸುತ್ತಿತ್ತು.

ಆದರ್ಶ

ಹರಿಣಾಕ್ಷಿ ಕೆಲಸ ನೀಗಿಸಿ ಆನಂದನ ಕೊಠಡಿಯಲ್ಲಿ ಬಂದಾಗ್ಗೆ ಆತನಲ್ಲಿರಲಿಲ್ಲ. ನಿಲುಗನ್ನಡಿಯಲ್ಲಿ ತನ್ನ ಬಿಂಬ ಕಾಣಿಸಿ ಕೊಂಡಳು. ಮುಖದಲ್ಲಿ ಹೆಮ್ಮೆ ಒಡೆದು ಕಾಣುತ್ತಿತ್ತು. ಆನಂದದ ಮಂದಹಾಸ ಹೊರಸೂಸುವಂತಿತ್ತು. ಹಾಗೇ ಸುತ್ತಲೂ ದೃಷ್ಟಿ ಚಲ್ಲಿದಾಗ ಮೇಜಿನಮೇಲೆ ಒಂದು ಪಾಕೀಟು ಕಾಣಿಸಿತು. ಪಾಕೀಟಿನ ಬಾಯಿ ಬಿಚ್ಚಿತ್ತು. ಮಡಿಕೆಗಳು ಅದಲು ಬದಲು ಹೊಂದಿದ ಪತ್ರ ಆನಂದ ಓದಿರುವನೆಂದು ಹೇಳುತ್ತಿತ್ತು. ಪತ್ರ ಓದುತ್ತ ಹೋದಂತೆ ಮುಖ ಮುದುಡ ತೊಡಗಿತು. ಭಯ ಕುದುರುವ ಭಾವ ಕಾಣುತ್ತಿತ್ತು: ತವರಿನಲ್ಲಿ ತನ್ನ ಜೀವನ ಕಳೆದ ರೀತಿ ಆಕೆಯ ಮುಂದೆ ಕುಣಿಯ ತೊಡಗಿತು. ತನ್ನ ಮುಂದಿನ ಜೀವನದ ಕಲ್ಪನೆ ಅದನ್ನು ಹೊಡೆಮೋಡಿಸಿ ಹೆದರಿಕೆಯನ್ನು ಹೆಚ್ಚಿಸಿತು. ಅತ್ತೆಯ ಕರೆ ಕೇಳಿ ಪತ್ರ ಮೊದಲಿನಂತೆ ಸರಿಯಾಗಿರಿಸಿ ನಡೆದಳು. ಮೊಗಸಾಲೆಯಲ್ಲಿ ಗೆಳತಿ ಮೀನಾ ಇದ್ದಳು.

“ ಮೀನಾ, ಸ್ವಲ್ಪ ತಲೆ ನೋಯುತ್ತಿದೆ ”

ಮಾತಿನಲ್ಲಿ ಜುಗುಪ್ಸೆ ಅವಿತುಕೊಂಡಿಂತಿತ್ತು.

“ ನಿದ್ರೆಯ ಕೊರತೆ ಕಾರಣವಲ್ಲವಷ್ಟೆ ? ”

ಮೀನಾಳ ನುಡಿಯಲ್ಲಿ ಹಾಸ್ಯದ ಸೆಳಕಿತ್ತು.

“ ನಿದ್ರೆ ಪೂರ್ತಿಯಾಗಿದೆ, ಮತ್ತೇನು ಕಾರಣವೋ ?”

" ಮೀನಾ, ಹತ್ತುಗಂಟೆಯ ಸುಮಾರು ನಳಿನಿ ಅಳುವ
ಧ್ವನಿ ಕೇಳಬರುತ್ತಿತ್ತಲ್ಲ ? " ಎಂದು ಹರಿಣಾಕ್ಷಿಯ ಅತ್ತೆ
ನಡುವೆ ಬಾಯಿ ಹಾಕಿದಳು.

" ಬೀದಿಯಲ್ಲಿ ಮುಗುಳು ನಗೆಯಿಂದ ನಿಂತಿರುವುದು
ಕಂಡನಂತೆ ಸುರೇಶ. ಅದು ಆತನಿಗೆ ಸರಿಕಾಣದ್ದಕ್ಕಾಗಿ ಕಣ್ಣೀರು
ಕರೆಯಬೇಕಾಯಿತು " ಮೀನಾ ಸ್ಪಷ್ಟೀಕರಿಸಿದಳು.

" ಅದೆಷ್ಟರ ಮಾತು ಮೀನಾ ? ಇಷ್ಟಕ್ಕಾಗಿ ಗೋಳಾ
ಡಿಸಬಾರದಿತ್ತು "

ಮುದುಕಿಯ ಸ್ವರದಲ್ಲಿ ಮರುಕ ಕೂಡಿತ್ತು. ಸುರೇಶನ
ನಡತೆಯ ಬಗ್ಗೆ ತಿರಸ್ಕಾರ ಭಾವ ವ್ಯಕ್ತವಾಗುತ್ತಿತ್ತು.
ಮೀನಾಕ್ಷಿಯಿಂದ ಇನ್ನೂ ಮಾತು ಸಾಕಷ್ಟು ಬೆಳೆಸುತ್ತಿದ್ದ
ರೇನೋ, ಆನಂದನ ಬರುವಿಕೆಯಿಂದ ಮೀನಾ ಎದ್ದಳು.
ಹರಿಣಾಕ್ಷಿಗೆ ಗೆಳತಿಯಿಂದ ಅಗಲುವದು ಬೇಡವೆನ್ನಿಸಿರಬೇಕು.
ಗೆಳತಿಗೆ ಕುಳಿತು ಕೊಳ್ಳಲು ಬಲವಂತಪಡಿಸಿದಳು. ಕೆಲಸದ
ನೆವ ಮುಂದೆ ಮಾಡಿ ಸಾಗಿಯೇ ಬಿಟ್ಟಳು. ಮೀನಾ ಆನಂದ
ನಿಂದ ದೂರಿರುವದು ಒಳಿತೆಂದು ಬಗೆದಂತೆ ತೋರುತ್ತಿತ್ತು
ಆಕೆಯ ನಡತೆಯಿಂದ. ಅಡಿಗೆಯ ಮನೆಯಲ್ಲಿದ್ದ ಅತ್ತೆಯ
ಹತ್ತಿರ ಹೋದಳು ಆನಂದನಾದರೂ ಅಲ್ಲಿಗೇನೇ ಹೋದ.
ಆತನ ಮುಖದಲ್ಲಿ ಎಂದಿನಕ್ಕಿಂತ ಉತ್ಸಾಹದ ಕಳೆ ಎದ್ದು
ಮೂಡಿದಂತಿತ್ತು.

" ಚಹಾ ಮಾಡಿ ತಾ " ಎಂದು ತನ್ನ ಕೊಠಡಿಗೆ
ತೆರಳಿದ. ಮೀನಾ ಚಹಾ ಮಾಡಿದಳು, ತೆಗೆದು ಕೊಂಡು
ಹೋಗುವ ಬಗೆ ಕಾಡಿತು. ಅತ್ತೆಗೆ ಒಯ್ಯಲು ಹೇಳುವದ

ನೀಗದಿದ್ದರೂ ತಾನು ಆನಂದನ ಹತ್ತಿರ ಹೋಗುವದು ಬೇಡವಾಗಿತ್ತು. ಉ ಪಾ ಯ ಗಾ ಣ ದೆ ಮೆಲುನಡಿಗೆಯಲ್ಲಿ ತಾನೇ ಹೋದಳು. ಹರಿಣಾಕ್ಷಿಯನ್ನು ಕಂಡು ಆನಂದ ಬೀರಿದ ನಗೆಯಲ್ಲಿ ಸರಳತೆಯಿತ್ತು. ಹರಿಣಾಕ್ಷಿಗೆ ಆ ನಗೆ ಈಟಿಯಂತೆ ವೇದನೆ ಕೊಟ್ಟಿರಬೇಕು, ಅಲ್ಲಿಂದ ಜಾರಲು ಹವಣಿಸುತ್ತಿದ್ದಳು. ಆನಂದ ಕುಳಿತುಕೊಳ್ಳಲು ಕೇಳಿಕೊಂಡಾಗ ಸಂಕಟಕ್ಕಿಟ್ಟುಕೊಂಡಿತು. ಹುಸಿನಗೆಯಿಂದ ಆಸೀನಳಾದಳು. ಆರೋಪಿಯು ಅಧಿಕಾರಿಯನ್ನು ಕಂಡಾಗಿನ ಎದೆ ಹೊಡೆತ ಹೊಡೆದುಕೊಳ್ಳುವಂತಿತ್ತು. ಹರಿಣಾಕ್ಷಿಯಲ್ಲಿ ಆಕೆಯ ಭಾವ ಭಂಗಿಕಂಡು ಆನಂದ........

"ಉತ್ಸಾಹ ಕಾಣುತ್ತಿಲ್ಲ ಹರಿಣಾ?"

"ಸ್ವಲ್ಪ ತಲೆನೋವು."

"ಅದೆಷ್ಟು ಹೊತ್ತಾಯಿತು?"

"ಒಂದು ಗಂಟೆ ಸಂದಿರಬೇಕು."

ಆನಂದ ತಲೆ ಹಿಸುಕಿ ಕೊನೆಗೆ ಪೆಟ್ಟಿಗೆಯಲ್ಲಿಯ ಚೀಟಿ ಕೊಂಡು ಬಿಸಿನೀರಿನಲ್ಲಿ ಪುಡಿ ಬೆರಿಸಿ, ತನ್ನ ಕೈ ಮುಟ್ಟಿ ಕುಡಿಸಿ ಉಪಚರಿಸಿದ. ನಿದ್ರೆಯ ಸೋಗುಹಾಕಿದವರನ್ನು ಎಚ್ಚರಿಸುವ ಸಾಹಸ ಆನಂದನದಾಗಿತ್ತು.

"ಔಷಧ ಗುಣ ಕಂಡುಬಂತಷ್ಟೆ?"

"ಪೂರ್ಣವಲ್ಲದಿದ್ದರೂ ಸ್ವಲ್ಪ."

"ಕೆಲವೇಳೆಯಲ್ಲಿ ಪೂರ್ಣ ಗುಣ ಕೊಡುತ್ತದೆ"

"ಅಷ್ಟಾದರೆ ಸಾಕಲ್ಲ!"

ಹೊರಗೆ ಸುರೇಶನ ಸ್ವರ ಕೇಳಿ ಹರಿಣಾಕ್ಷಿ ಎದ್ದು
ಅಡಿಗೆ ಮನೆ ಸೇರಿದಳು. ಅಗಲಿಕೆಯಿಂದ ಪೂರ್ಣವಲ್ಲದಿದ್ದರೂ
ಸ್ವಲ್ಪ ಮನಸ್ಸಿಗೆ ಹಾಯಾಗಿರಬೇಕು. ಆನಂದ ಆ ಪಾಕೀಟ
ತ್ತಿಗೆಯ ಪೆಟ್ಟಿಗೆಯಲ್ಲಿರಿಸಿ ಸುರೇಶನೊಡನೆ ಹೊರ ತೆರಳಿದ
ಇಬ್ಬರಿಂದಲೂ ಹಲವು ಮಾತುಗಳು ತೆರೆ ಹವೆಯಲ್ಲಿ ತೇಲ
ಆವ ತೀರದಲ್ಲೋ ಮಾಯವಾಗುತ್ತಿದ್ದವು.

ಆನಂದ ಮನೆ ಸೇರಿದಾಗ ಹರಿಣಾಕ್ಷಿ ಪಡಸಾಲೆಯಲ್ಲಿ
ಮಲಗಿದ್ದಳು ತಾಯಿ ಆನಂದನಿಗೆ ನೀರು ಕೊಟ್ಟಳು. ಊಟ
ಮುಗಿಸಿ ಹರಿಣಾಕ್ಷಿಯನ್ನೆಬ್ಬಿಸಿ ತನ್ನ ಕೋಣೆಗೆ ತೆರಳಿದ. ತನ
ಗಾಗಿ ಹಾಸಿಗೆ ಸಿದ್ಧವಿತ್ತು. ಕಾಲುಗಂಟೆ "ರಿಕಾರ್ಡು"
ಹಾಡಿಸಿ ಕೇಳಿ ತಣಿದು ತನ್ನ ಹಾಸಿಗೆಗೆ ಜೋಡಿಯಾದ
ಹರಿಣಾಕ್ಷಿ ಅತ್ತ ಸುಳಿಯಲಿಲ್ಲ. ಅತ್ತೆಯ ಹತ್ತಿರ ಮಲಗಿದಳ
ಆನಂದನಿಗೆ ನಿದ್ರೆ ಬಾರದಾಯಿತು. ವಿಚಾರಗಳ ತಾಕಲಾಟ
ನಡೆಯಿತು.

"ಪಾಕೀಟು ಮುಚ್ಚಿರಿಸದೆ ಹೋದ ಕಾಲದಲ್ಲಿ ಹರಿ
ಣಾಕ್ಷಿ ಓದಿರಲಿಕ್ಕಿಲ್ಲವಷ್ಟೆ? ಓದಿದ್ದರೆ ತಾಪವೆಷ್ಟಾಗ
ಬಾರದು....! ಇಂದು ಅವಳಲ್ಲಿ ಉತ್ಸಾಹವಿಲ್ಲ. ತಲೆನೋವ
ಎಂದಳು."

"ಏನೇ ಇರಲಿ ಪತ್ರದ ಬಗ್ಗೆ ನಾನಾಗಿ ಮೊದಲ
ಮಾತೆತ್ತಬಾರದು. ಆಕೆಯೇ ಮೊದಲು ಮಾಡಿದಲ್ಲಿ ಸಾಂತ್ವನ
ಹೇಳ ಬಹುದೆಂದು ನಿರ್ಧರಿಸಿದನು. ವಿಚಾರ ಮತ್ತು ಮುಂದ
ವರಿಯಿತು."

" ಯಾರಿಂದ ಪತ್ರ ಬಂದಿರಬೇಕು ? ಆಕೆಯ ತವರೂರಿನಿಂದ ಬಂದುದೇನೊ ನಿಜ. ಆದರೆ.... ಯಾರಿಂದ ಎಂಬುದು ತಿಳಿಯುವಂತಿಲ್ಲ ಯಾರ ಸಹಿಯೂ ಇಲ್ಲ, ನಂಬುವದಾದರೂ ಹೇಗೆ ?"

" ಸುಳ್ಳು ಬರೆಯಲು ಅವರಿಗೇನು ಅಗತ್ಯ ? "

" ಅವರ ಮನೆಯ ದ್ವೇಷಿಗಳ ಕಿಡಿಗೇಡಿತನವೇಕಾಗಬಾರದು ? "

" ಸಂಗತಿ ಸರಿಯಿದ್ದಲ್ಲಿ ನನಗೇನಾಗಬೇಕಾಗಿದೆ ? ನನ್ನ ಶೀಲ ನನಗಾಗಿ ಇಲ್ಲವೇ ? ಆಕೆ ಒಂದುವೇಳೆ ಚರಿತ್ರಹೀನೆಯಾಗಿದ್ದಲ್ಲಿ ಆ ದೋಷ ಆ ಜೀವನಕ್ಕೆ ಮೀಸಲು. ಕಲ್ಲನ್ನು ಕುಣಿಸಬಲ್ಲ ಮಾನವನಿಂದ, ಹೃದಯ, ಮನಸ್ಸು, ಬುದ್ಧಿಯಿದ್ದ ಒಂದು ಜೀವಿಯನ್ನು ತಿದ್ದಲಾಗದೆ ? ನನ್ನ ನಯವಾದ ನಡತೆ ಹರಿಣಾಕ್ಷಿಯ ಹೃದಯ ಸೆರೆ ಹಿಡಿಯದೆ. ನನ್ನ ಪವಿತ್ರ ಶೀಲದ ಬಲದಿಂದ ನನ್ನಂತೆ ಮಾಡಿಕೊಳ್ಳಲಾಗದೆ ? "

" ಆಗದೇಕೆ ? ತಮ್ಮ ಹೆಣ್ತನದ ಶೀಲ ಪಾಲಿಸಿ ದುರ್ಗುಣಿ ಪತಿಗಳನ್ನು ತಮ್ಮಂತೆ ಮಾಡಿಕೊಂಡ ಉದಾಹರಣೆಗೇನು ಕೊರತೆ ? ನನ್ನ ಸಂಗಾತಿಯ ಹೃದಯವನ್ನು ನನ್ನಲ್ಲಿ ಎರಕ ಹೊಯ್ದುಕೊಳ್ಳದಿದ್ದಲ್ಲಿ ನನ್ನಿಂದ ಮತ್ತಾವ ಕೆಲಸ ತಾನೇ ನೀಗೀತು ? "

" ಹೆಂಡತಿಗೆ ಬಾಗಿ ನಡೆವವನೆಂದು ಜನರಂದರೆ ? "

" ನನ್ನ ಬಾಳು ಜನತೆಗಾಗಿ ಇಲ್ಲ, ನನಗಾಗಿ ನನ್ನ

ಬಾಳು. ನನ್ನ ಬಾಳಿನಲ್ಲಿ ತಟಕಿಕ್ಕುವ ಜೇನು ಸವಿಯುವ ವರು ನಾವು''

ತನ್ನ ಸಂಗ, ಸಂಗಾತಿಯನ್ನು ಶುಭ್ರಗೊಳಿಸುವದೆಂದು ದೃಢೀಕರಿಸಿದ ಸಾಹಿತಿಯ ವಿಚಾರ ಕಾಗದದಲ್ಲಿ ಒಳಿತಾಗಿ ಮೂಡಿದಾಗ ಆತನಿಗೆ ಲಭಿಸುವ ಶಾಂತಿ ಆನಂದನಿಗೆ ಸಿಕ್ಕಿತು. ಆ ಶಾಂತಿಯಲ್ಲಿ ನಿದ್ದೆ ಹೋದ.

ರವಿಯು ಮುಂಜಾನೆ ಇಳೆಗೆ ನವಚೇತನ ಎರಚುತ್ತಿದ್ದ ಕಾಲವದು. ಆನಂದ ಅಡಿಯಾಟ ತೀರಿಸಿ ಬಂದಾಗ ಹರಿ-ಣಾಕ್ಷಿ ಓರ್ವಳೆ ಮನೆಯಲ್ಲಿದ್ದಳು. ಉಪಹಾರ ತಂದಿರಿಸಲು ಸೂಚಿಸಿದ. ಸುತ್ತಲೊಮ್ಮೆ ನಿಟ್ಟಿಸಿದಳು. ಆ ನೋಟ ಏನನ್ನೊ ಹುಡುಕುವಂತಿತ್ತು. ಉಪಹಾರದ ತಟ್ಟೆ ಆನಂದನ ಮುಂದಿ-ರಿಸಿ ಹೊರಳಿದಳು. ತಿಂಡಿಯಲ್ಲಿ ಪಾಲುಗಾರ್ತಿಯಾಗಲು ಕೇಳಿಕೊಂಡ. ಕೇಳಿಕೆಯಲ್ಲಿ ತುಂಬ ಆದರ ಭಾವವಿತ್ತು. ಬಂದಾಳೆಂಬ ಆಶೆಯು ಬೆರೆತಿತ್ತು. ಕಾಫಿ ಮಾಡತೊಡಗಿದಳು. ಆನಂದನಿಗೆ ಕಾಫಿ ಕೊಟ್ಟು ಉಳಿದುದನ್ನು ಹೇಗೋ ತಿಂದಳು. ಇದಿಷ್ಟರಿಂದ ಆನಂದನಿಗೆ ಆನಂದ ಹೆಚ್ಚಿತು. ಹೊರಗಿನಿಂದ ಅತ್ತೆ ಬಂದಳು. ಹರಿಣಾಕ್ಷಿ ಅಡಿಗೆ ಮನೆ ಸೇರಿ ಅಡಿಗೆ ಮಾಡ ಲಣಿಯಾದಳು. ಆನಂದ ತನ್ನ ಕಾರ್ಯಕ್ಕೆ ಹೊರಟ.

ಆನಂದ ಎಂದಿನಂತೆ ಹರಿಣಾಕ್ಷಿಯನ್ನು ಪ್ರೇಮದಿಂದ ಕಾಣುತ್ತ ನಡೆದ. ದಿನಗಳೆದಂತೆ ಹರಿಣಾಕ್ಷಿಯ ಭಯ ಜಾರಿ ತಾದರೂ ಆಕೆಯಲ್ಲಿ ವಿಚಾರ ಸ್ಪರ್ಧೆನಡೆಯಿತು. "ಹೌದು" ಆ ಪತ್ರ ಓದಿದಾಗ್ಗೆ ಏನನ್ನೋ ಎಣಿಸಿದ್ದೆ. ಆ ದಿನ ಅವರು ಉಪಚರಿಸಿದುದನ್ನು ಕಂಡು ಒಡಲಿನಲ್ಲಿ ಲಾವಾರಸ ಹುದು

ಗಿಸಿಕೊಂಡು ಮನೋಹರವಾಗಿ ಕಂಗೊಳಿಸುವ ಹೃಥ್ವಿ ಎಂದು ಕೊಂಡಿದ್ದೆ. ಆದರೆ..........? ಕಣ್ಣು ಹನಿಕೂಡಿದವು."

"ನಾನು ತಿಳಿದುಕೊಂಡಿದ್ದೇನುತಪ್ಪು ? ಹೀಗೆ ತಿಳಿದು ಕೊಳ್ಳಲು ಅವಕಾಶ ಕಲ್ಪಿಸಿದುದು ಆವುದು ? ಎಷ್ಟೋ ಗಂಡಸರ ನಡತೆ ಕಾರಣವಲ್ಲವೆ ? ಸುರೇಶ ಸಹನಿಯರ ದಿನದ ಪಾಡು ಕಾಣುವದಿಲ್ಲವೇ ? ನನ್ನದೆಂಥ ಭಾಗ್ಯ....! ಗೆಳತಿ ಮೀನಾ ಹೇಳಿದುದು ಸತ್ಯ ಕಂಡುಕೊಂಡಿತಲ್ಲ. ಅವರ ನಡತೆ ಆದರ್ಶವೆಂಬುದು ಈವರೆಗೂ ಆವ ತರುಣಿಯರನ್ನೂ ಹೀನ ದೃಷ್ಟಿಯಲ್ಲಿ ನನ್ನವರು ಕಂಡದ್ದು ಎಂಥ ಹೀನ ಮನಸ್ಸಿನವನೂ ಹೇಳಲಾರನಂತೆ. ನನ್ನ ಗೆಳತಿ ಇನ್ನೂ ಹೇಳಿದ್ದುಂಟು "ಕಸದಲ್ಲಿ ರಸಕಾಣುವ ರಸಋಷಿಯಂತೆ ಹೌದು" ನಾನವರ ಕೈ ಹಿಡಿದಂದು ಕಾಣುತ್ತೇನೆ. ಮುಖದಲ್ಲಿ ಆವಾಗಲೂ ಶಾಂತಿ ಮಿನಗುತ್ತಿದೆ. ನೆಮ್ಮದಿ ತೋರುತ್ತಿದೆ. ನಗೆಯು ನಲಿಯುತ್ತವೆ. ಕಳೆಯು ಕುಣಿಯುತ್ತಿದೆ. ರಸಿಕ ಭಾವ ತಾಳ ಹಿಡಿದಿರುತ್ತದೆ. ಇಂಥ ಆದರ್ಶ ಸುಂದರ ಮೂರ್ತಿಗೆ ನಾನು ತಕ್ಕವಳೆ ? "

"ಹೌದು ನಾನು ತಕ್ಕವಳಲ್ಲವೆಂದೇ ವಿಧಿಯು ಅವರ ಸಂಗಾತಿಯನ್ನಾಗಿಸಿದೆ. ನನ್ನವರ ಪವಿತ್ರಶೀಲದಲ್ಲಿ ಮಿಂದು ಪಾವನೆ ಯಾಗುವದಕ್ಕೋಸ್ಕರವಲ್ಲದೆ ಮತ್ತೇನು ? ನನ್ನನ್ನು ನಂಬಿದವರಲ್ಲಿ ಏನೋ ಕಾಣುತ್ತಿದ್ದೆನಲ್ಲ ! ತಮ್ಮ ಶೀಲದ ಸೆಳವಿನಲ್ಲಿ ಸಿಲುಕಿ ಕೊಂಡರು. ನಲಮೆರಸವೆರೆದು ಹೃದಯ ಹದಗೊಳಿಸಿದರು. ಈ ವರೆಗೆ ಮೊದಲು ತಾವಾಗಿಯೇ ಮಾತನಾಡಿಸಬೇಕಾಗಿತ್ತಲ್ಲ....... ! ಸರಿಯಾದ ಉತ್ತರ ನನ್ನಿಂದ

ಎಷ್ಟೆರವರೆಗೆ ಬಂದಿರಬೇಕು ? ಆದರೂ ನನ್ನಲ್ಲಿ ತುಂಬ ವಾತ್ಸಲ್ಯ" ಆಫೀಸು ಬಿಡುವ ಹೊತ್ತಾಯಿತು. ನೇರವಾಗಿ ಮನೆಗೆ ಬಾರರೆ ? ತಿರುಗಾಟ ತೀರಿಸಿ ಕೊಂಡು ಬರಬಹುದೆ ?

ಆನಂದನ ಸಂದರ್ಶನಕ್ಕಾಗಿ ಹರಿಣಾಕ್ಷಿಯ ಹೃದಯ ಕಾತರತೆಹೊಂದಿತ್ತು. ತಡೆಯದೆ ಮನಸ್ಸು ಆಫೀಸೆಲ್ಲ ಸುತ್ತಾಡಿ ಬಂದಿತ್ತು. ಪಕ್ಷಿಗಳೆಲ್ಲ ತಮ್ಮಗೂಡು ಸೇರಿದ್ದರೂ, ಆನಂದ ಇನ್ನೂ ಬಂದಿರಲಿಲ್ಲ. ಹರಿಣಾಕ್ಷಿಯು ಕೊಠಡಿಯಲ್ಲಿ ಆನಂದನ ಭಾವಚಿತ್ರಕ್ಕೆ ಹಣಿ ಹಚ್ಚಿದಳು. ಹೊರಗಡೆ ಹೆಜ್ಜೆಯುಸದ್ದಾಯಿತು. ಹೊರಬಂದಳು. ಆನಂದ ಬಂದಿದ್ದ. ಹರಿಣಾಕ್ಷಿ ತಡೆಯದೆ,

"ಆಫೀಸು ಬಿಡುವಾಗಿ ಬಹಳ ಹೊತ್ತಾಯಿತೇನು ?"

ಮಾತಿನಲ್ಲಿ ಪ್ರೇಮ ಸೂಸುತ್ತಿತ್ತು. "ಗೆಳೆಯರೊಡನೆ ತಿರುಗಾಡಲು ಹೋಗಿದ್ದೆ."

ಹರಿಣಾಕ್ಷಿಯೇ ಆನಂದನಿಗೆ ಉಣ್ಣಲು ಕೊಟ್ಟಳು. ಇಂದು ಅವಳಲ್ಲಿ ಎಲ್ಲಿಲ್ಲದ ಸ್ಫೂರ್ತಿ ಕಾಣುತ್ತಿತ್ತು. ಆನಂದನಿಗೆ ಊಟ ತುಂಬ ರುಚಿಯಾಗಿರಬೇಕು. ಆತನಿಗೆ ಆವುದೋ ಹೊಸತನ ನೋಡುತ್ತಿರುವೆನೆಂದೆನಿಸಿತು. ಆತನ ಊಟ ಪೂರ್ತಿಗಾಣುವುದರಲ್ಲಿ ಕೊಠಡಿ ಉಡುಗಿ ಹಾಸಿಗೆ ಸಿದ್ಧ ಪಡಿಸಿದಳು. ಅತ್ತೆಯೊಡನೆ ತಾನೂ ಊಟಕ್ಕೆ ಕುಳಿತಳು. ಆನಂದ ಕೊಠಡಿಗೆ ಬಂದು ನೋಡುತ್ತಾನೆ, ಎಂದಿನಕ್ಕಿಂತ ಹಾಯ- ಕಾಣುತ್ತಲಿತ್ತು. ಅರ್ಧಗಂಟೆಯಲ್ಲಿ ಹರಿಣಾಕ್ಷಿ ಬಂದಳು.

"ಹರಿಣಾ, ಚಂದ್ರನ ಬೆಳ್ನಗೆಯಲ್ಲಿ ಪ್ರೇಮರತಜಗದ ಸೊಬಗು ಕಾಣೆಯಾ ?"

" ಆ ನಗೆಯಲ್ಲಿ ಪ್ರಕೃತಿಯನ್ನು ಹದಗೊಳಿಸುವ ಪಾವನತೆಯಿದೆ ....! ನಯಗೊಳಿಸುವ ನಯವಿದೆ....! ಕಲ್ಮಶಗಳನ್ನು ಸುಂದರಗೊಳಿಸುವ ಶಕ್ತಿಯಿದೆ. "

ಈ ನುಡಿಯಲ್ಲಿ ಮೀಸಾಳ ಭಾವ ವ್ಯಕ್ತವಾಗುತ್ತಿತ್ತು.

ಆನಂದ ಆಕೆಯ ಕಣ್ಣುಗಳಲ್ಲಿ ತನ್ನ ದಿಟ್ಟಿನೆಟ್ಟ. ಏನೋ ಕಾಣಿಸುತ್ತಿತ್ತು. ಹಾಗೆಯೇ ಹರಿಣಾಕ್ಷಿಯ ಹೃದಯದಾಳದಲ್ಲಿಳಿದ. ಚಂದ್ರಕಾಂತಿ ಪಸರಿಸಿದುದು ಕಾಣಿಸುತಲಿತ್ತು. ಸುತ್ತಿರಿದ ಆ ಬೆಳಕಿನ ಮಧ್ಯದ ಪೀಠದಲ್ಲಿ ತಾನೇ ಕಾಣಿಸಿಕೊಂಡ.

' ಹರಿಣಾ.... ! '

ಆನಂದನ ಕಣ್ಣಿನ ಕೊನೆಯಂಚಿನಿಂದ ನೀರು ಚಿಮ್ಮಿದವು. ತನ್ನ ಶೋಧ ಸಿದ್ಧಿಸಿದ ವಿಜ್ಞಾನಿಯ ಆನಂದ ಆತನಲ್ಲಿತ್ತು.

' ಮಾನಸಸರಸಿಯಲ್ಲಿ ನಾನು ಮಿಂದೆ....! '

ಹರಿಣಾಕ್ಷಿಯ ಭಾವದಲ್ಲಿ ಭಕ್ತಿಯ ಮಡುಗಟ್ಟಿದುದು ಒಡೆದು ಕಾಣುತ್ತಿತ್ತು. ಇದ್ದಕಿದ್ದಂತೆ ಈರ್ವರ ದೃಷ್ಟಿ ಕೊಠಡಿಯ ಭಿತ್ತಿಯಮೇಲಿದ್ದ ಎರಡು ದಳವುಳ್ಳ ಒಂದೇ ದೇಟಿನ ಚಿತ್ರದಮೇಲೆ ಬಿತ್ತು. ಆ ಚಿತ್ರದ ಅರ್ಥಪೂರ್ಣ ಮೌನದ್ದು ಸಿರು ಅವರಿಗೆ ಹೊಳೆದಿರಬೇಕು.

ಶಾಂತಿ

ಚಂದ್ರಣ್ಣನಿಗೆ, ಎತ್ತೂ ಬೆಳಕು ಕಾಣದಾಗಿದೆ ಎಷ್ಟು ದಿಟ್ಟಿಸಿದರೂ ಸಂಧಿ ಪ್ರಕಾಶ ಕೂಡ ಕಾಣಿಸಲೊಲ್ಲದು. ನೋಡ ನೋಡದಂತೆ ಭಯಾನಕತೆ, ದುತ್ತೆಂದು ಮನದೆದು ತಾಂಡವ ನೃತ್ಯ ನಡೆಸಿದೆ. ತಾನೆಲ್ಲಿರುವೆನೆಂಬ ಎಚ್ಚರಕೂಡ ಇಲ್ಲ. ನಿರಾಶೆಯ ನಿಟ್ಟುಸಿರು ಹೊರಸೂಸತೊಡಗಿವೆ. ತನ ಗರಿಯದಲೇ ನೀಳುಸುರಿನೊಂದಿಗೆ ಮಾತು ಮೂಡಿ ಗಾಳಿ-ಗೂಡಹತ್ತಿವೆ.

ಹಾ ! ಏನಿದು ಬಾಳು....! ಏನಿದು ಜೀವನ....! !

ಎಲ್ಲವೂ ಬರಿದೊ.... ಬರಿದು....!

ಅಗೋ ! ಆ ಮಹಡಿಯ ಮನೆ, ಎಷ್ಟೋ ಎಲುಬುಗಳ ಸಿವುಡಿನ ಅಸ್ತಿವಾರದ ಮೇಲೆ ತಲೆ ಎತ್ತಿ ಮೆರಗು ಕೊಡ ತೊಡಗಿದೆ.

ಎಷ್ಟು ದಿನದ ಈ ಚಂದ ? ಈ ನಯನ ಮನೋಹರ !

ಕೊನೆಗೆ ಮಣ್ಣಲ್ಲಿ ಮಡಗುವದು....

ಈ ಮನೆಯಲ್ಲಿರುವವರು, ಎಷ್ಟು ದಿನ ಇರುವರು....? ಹಿಂದಿನವರೆಲ್ಲ ಎಲ್ಲಿ ಇದ್ದಾರೆ ? ಎಲ್ಲ ಬರಿದು....ಹುಡಿಯಲ್ಲಿ ಹುಡಿಯಾಗುವದೇ ಗತಿ....!

ಅಲ್ಲದೆ ಮತ್ತೇನು....?

ಗೆಳೆಯ ಮಲಿಕ್ಸಾ....ಈಗೆಲ್ಲಿ....? ನಿನ್ನೆ ಎಷ್ಟು ಮಾ
ನಾಡಿಕೊಂಡಿದ್ದೆವಲ್ಲ !

ಇಂದು ಇದೇ ಕೈಯ್ಗಳು ಮಣ್ಣುಗೂಡಿಸಿದವು....

ಕೀರ್ತಿ ಉಳಿವುದು ! ಯಾರಿಗಂತೆ ಕೀರ್ತಿ ? ಆ ಕೀರ್ತಿಯಿಂದ ಮಲಿಕ್ಸಾಗೇನಂತೆ ? ಉತ್ತಮ ಕವಿ ! ಸಹಜ ಕವಿ ! ಪಂಡಿತ ! ವಿಷಯ ಸ್ಪಷ್ಟೀಕರಣವೆಷ್ಟು ಚೆಂದ ! ಜನರು ನೆನಸಬಹುದು. ಎಷ್ಟು ದಿನ ? ಮರೆಯುವ ವರೆಗೆ ! ಕಡೆಗೆ ಶಾಸ್ತ್ರ ಇರುವ ವರೆಗೂ ....! ಅವರೂ....ಒಂದು ದಿನ....

ಹೆಂಡತಿ ಮಕ್ಕಳು ನಕ್ಕು-ನಲಿಯುತಿದ್ದರು. ಈಗ....?! ದುಃಖದಲ್ಲಿ ಹುದುಗಿ ಹೋಗಿದ್ದಾರೆ. ಒಂದು ದಿನ ಮಣ್ಣಿನಲ್ಲಿಯೂ ಹುಗಿದು ಹೋಗುತ್ತಾರೆ.

ಇರುವವರು ಯಾರು....?

ಎಲ್ಲ ಬರಿದು !

ಜಗವನು ಬೆಳಗಿಸುವ ವಿದ್ಯುತ್ತನ್ನು ಹೊರಗೆಳೆದ 'ಫ್ರಾಂಕಲಿನ್' ಈಗೆಲ್ಲಿ ? ಅವನು ಎಲ್ಲಿ ಹುಡುಕಿದರೂ ಸಿಕ್ಕನು.

ದೀಪಗಳು ಇನ್ನೂ ಹೊಳೆಯುತ್ತಿವೆ, ಮುಂದೆಯೂ ಹೊಳೆಯುತ್ತವೆ. ಅವನ ಹೆಸರನ್ನು ಉಸುರುತ್ತಿವೆ. ಈ ಉಸಿರು ಆತನಿಗೆ ಕೇಳಿಸದು, ಖಂಡಿತವಾಗಿ ಕೇಳಿಸದು ! ಎಲ್ಲವೂ ಅನಿಶ್ಚಿತ.

ಮರಣ....!

ಹುಟ್ಟಿದಾಗಲೇ ನಮ್ಮನ್ನು ಕಬಳಿಸಲು, ಮರೆಯಲ್ಲಿ ಬಾಯ್ದೆರೆದು ನಿಂತಿದೆ. ಸುಂಗೇತೀರುವದು !

ಎಷ್ಟು ದುಡಿತ ! ಎಷ್ಟು ಕಷ್ಟ ! ಹೊಟ್ಟೆಗಾಗಿ, ಹೆಸರಿಗಾಗಿ ಎಷ್ಟೊಂದು ಸೆಣಸಾಟ ! ಶಾಂತಿ ಎಲ್ಲಿದೆ....? ರೋಗಾದರೆ ದುಃಖ ! ಹಾನಿಯಾದರೆ ದುಃಖ !

ದುಃಖದ ತವರು....! ಸುಖದ ಸುಳಿವಿಲ್ಲ !

ಯಾವುದು ಸುಖ ಕೊಡುವದು ? ಎಷ್ಟು ದಿನ ? ಎಲ್ಲ ಸುಳ್ಳು, ಸುಳ್ಳೇ ಸುಳ್ಳು ! ಏತಕ್ಕಾಗಿ ಬದುಕಬೇಕು ? ಅದು ಎಷ್ಟು ದಿನ ಆರಿಗೂ ಗೊತ್ತಿಲ್ಲ ! ಜೀವವಿರುವ ವರೆಗೆ....ಎಲ್ಲರಿಗೂ ಗೊತ್ತು !

ಒಬ್ಬರ ಹಿಂದೆ ಒಬ್ಬರು ಹೋಗುವರು ! ಮತ್ತೆ ಒಬ್ಬರ ಹಿಂದೆ ಒಬ್ಬರು ಬರುವರು.

ಬಂದವರು ನಿಲ್ಲುವದಿಲ್ಲ !

ಹೋದವರು, ಬಂದದ್ದು ನನಗೆ ಒಬ್ಬರದೂ ಪರಿಚಯವಿಲ್ಲ ! ಈ ಹೆಂಡತಿ ಈ ಮಕ್ಕಳು ಈ ಮನೆ ಒಂದು ದಿನ ಬಿಟ್ಟು ಹೋಗಲೇಬೇಕು. ಇರುವವರಾರು ?

ಎಲ್ಲರೂ ಮಣ್ಣಲ್ಲಿ ಕರಗಿ ಹೋಗುವವರೆ !

ಚಂದ್ರಣ್ಣ ಮೌನವಾಗಿ, ಶೂನ್ಯ ಮನಸ್ಕನಾಗಿ ಕೆಲವು ಹೊತ್ತು ಗೊಂಬೆಯಂತೆ ಕುಳಿತಲ್ಲಿಯೇ ಅಲುಗದೆ ಕುಳಿತನು. ಮತ್ತೆ ಎಲ್ಲಿಯಾದರೂ ಶಾಂತಿಯ ಝರಿ ಒಸರಬಹುದೆಂದು ವಿಚಾರಗಳನ್ನು ಅಗೆಯತೊಡಗಿದನು. ಅಗೆದಂತೆ ಹಸಿಯು

ಎಲ್ಲಿಯೂ ಹತ್ತಲೊಲ್ಲದು. ಅಗಿಯುವದು ನಿಲ್ಲಿಸಲೊಲ್ಲ. ಏನೋ ಸ್ವಲ್ಪ ಕೈಗೆ ತಂಬಲ ಹತ್ತಿದಂತೆ ಎನಿಸತೊಡಗಿದೆ.

" ಅವಿರತ ಉದ್ಯೋಗದಲ್ಲಲ್ಲದೆ, ಇನ್ನಿತರಲ್ಲಿ ಶಾಂತಿಯ ಝುರಿ ಇಲ್ಲ " ಜವಾಹರರು ಹೇಳುತ್ತಾರೆ.

ಹೌದು ! ಅದರಲ್ಲಿ ಸುಖ-ಸಮಾಧಾನಗಳಿವೆ. ಅಂತೇ ಜಗತ್ತು ಮುಂದರಿಯುತ್ತಿದೆ.

ದುಡಿದೂ—ದುಡಿದೂ, ಉಂಡೂ—ಉಂಡೂ ಕಡೆಗೆ ಸಾಯುವದು !

ಸಾವು.... ಸಾವು ಬಿಟ್ಟದ್ದಲ್ಲ ?

ಮತ್ತೆ ಕೈಯೊಣಗಿತು. ಮೊದಲಿನಂತೆಯೇ ಆಯಿತು. ಹಸಿಯೂ ಇಲ್ಲ, ಅದರ ಸುಳುವೂ ಇಲ್ಲ.

ಸಾವು ಇರಲಿ. ಒಂದು ಬಾಳಿನಲ್ಲಿ ಬದುಕುವ ಜನರಾದರೂ ಒಮ್ಮೆಲೇ ಎಲ್ಲಿ ಸಾಯುವರು ?

ಯಾರೇ ಉಳಿಯಲಿ ಅವರಿಗೆ ಸಂತಾಪ. ಆ ಕುಲುಮೆಯಲ್ಲಿ ಕುದಿದೂ ಕುದಿದೂ ಎಂತೋ ಒಮ್ಮೆ ಕರಗುವದು.

ಎಲ್ಲಿವೆ ಸ್ಥಾಯಿಯಾದ ಶಾಂತಿ ?

ಕವಿಗಳು ಹೇಳುವರು- ಹಸುರಿನ ಮೇಲೆ, ಉದುರಿದ ಜಲಬಿಂದುಗಳಲ್ಲಿ, ವಿಹಂಗಮಗಳ ಕಿಲಿ-ಬಿಲಿಯಲ್ಲಿ, ತುಂಬ ಹುಲುಸಾಗಿ ಬೆಳೆದ ಬೆಳೆಸಿನಲ್ಲಿ, ಹಾಲ್ಗಾಳಿನಲ್ಲಿ, ಹಸುರೆಲೆಯಲ್ಲಿ, ತುಂಬು ಬಸುರಿಯಲ್ಲಿ, ಹಸುಮಕ್ಕಳಲ್ಲಿ, ಹೊಸ ಬಾಳಲ್ಲಿ, ಸೂಸಿ ಹರಿಯುವ ತೊರೆಯಲ್ಲಿ, ಗಾಳಿಯೂದುವ ಸಿಳ್ಳಿನಲ್ಲಿ,

ಬಿಸಿನೀರಲ್ಲಿ, ಮಸಣದಲ್ಲಿ, ಮರಳಲ್ಲಿ ಹೊರಳಲ್ಲಿ, ಮಕ್ಕಳಕ
ಯಲ್ಲಿ, ನಲ್ಲೆಯ ಸೊಲ್ಲಿನಲ್ಲಿ, ತಂದೆ-ತಾಯ್ಗಳವಾತ್ಸಲ್ಯದಲ್ಲಿ
ಭೋಗಿ ರಸಯೋಗಿ ತಾ ಮಣಿದತ್ತ ದಿನಸಿತ್ಯ ತಣಿಯುದನ
ಸತ್ ಸುಧಾರಸದಲ್ಲಿ ಮಿಂದು.

ನಿಜವೆ....?

ಇಲ್ಲ. ಇದಾವುದರಲ್ಲಿಯೂ ಇಲ್ಲ....... ಎಲ್ಲವೂ ಇಲ್ಲ
ದಾಗುವವು. ಮತ್ತೆಲ್ಲಿ ?

ಎಲ್ಲ ಸುಳ್ಳು. ಬರಿದೋ ಬರಿದು.

ಅಲ್ಲಿರುವದೇನು ಶಾಂತಿ ?

ಆ ಬೆಟ್ಟದಲ್ಲಿ, ನೀರಿನೆಡೆಯ ಗವಿಯಲ್ಲಿದ್ದ ಸನ್ಯಾಸಿಯ
ನುಡಿಯಲ್ಲಿ. ಇದು ತೀರ ಸುಳ್ಳು.

ಅವನ ಗೋಳು ಅವನಿಗೇ ಗೊತ್ತು ' ಎತ್ತಲೂ ತುಂಬಿ
ಶಾಂತಿ ' ಎಂದು ಹೇಳುವ ಅವನು ಎಲ್ಲ ಬಿಟ್ಟು ಅಲ್ಲೇ
ಓಡಿ ಹೋಗಿ ಕೊರಗಿ ಕರಗಿ ಸಾಯುವನು ?

ಸಾವು ತಪ್ಪದು !

ಇದು ಯಾರಿಗೆ ಗೊತ್ತಿಲ್ಲ ! ಎಲ್ಲರಿಗೂ ಗೊತ್ತಿದೆ. ಯಾರ
ನಗುವದನ್ನು ನಿಲ್ಲಿಸಿದ್ದಾರೆ ?

ಇಂದು ನಗುವವನು ನಾಳೆ ಅಳುತ್ತಾನೆ, ಈಗ ಅಳು
ವವನು ಇನ್ನೊಂದು ಗಳಿಗೆಗೆ ನಗುತ್ತಾನೆ. ಎಲ್ಲ ವಿಚಿತ್ರ !

ಸಾವು ಇದ್ದರೂ.... ಸತ್ತವರ ಕಂಡಾಗ ಮಾತ್ರ ಸಾ
ನೆನೆಸಿ ಕಣ್ಣೀರು ಆಸುರಿಸುತ್ತಾನೆ.

ಬದುಕುವವರು ಸಾವಿನಿಂದ ದೂರ ಬಹುದೂರ ಎಂಬ

ತಿಳಿದು, ಅಲ್ಲಿ; ನೆನಪಿಲ್ಲದೆ ನೆಗೆದಾಡುತ್ತಾರೆ.

ಹುಚ್ಚರು....!

ಮಲಿಕ್ಸಾ, ಅಮರತ್ವದ ಸುದ್ದಿಯನ್ನೇ ಬಿತ್ತರಿಸುತ್ತಿದ್ದ; ಆದರೆ....?

ಅವನೇ ನಿನ್ನೆ ಸಾವಿನ ಬಸಿರನ್ನು ಹೊಕ್ಕ! ಎಲ್ಲ ಮೋಜಾಟ!

ಆತ್ಮನು ಅಮರನಂತೆ, ಇದ್ದರೇನಂತೆ?

ಏನೂ ತಿಳಿಯದವನಾಗಿ 'ಮೂಕ ವಿಸ್ಮಿತ'ನಾದನು ಚಂದ್ರಣ್ಣಾ.

ಅಲ್ರಿ ನಾಟಕ ನೋಡೂನಂತ ಹೇಳಿದ್ರಿ; ಮೂಕರ್ಹಂಗ ಸುಮ್ಮನೆ ಕುಂತ್ರೆಲ್ಲ? ಏಳ್ರಿ ಹೊತಾಯ್ತು ಚಂದ್ರನ ಬೆಳಕ ಎಷ್ಟು ಚೆಂದ ಬಿದ್ದದ ನೋಡ್ರಿ. ಹೊರಗೆ 'ಸುಮಾ' ಕೈ ಮಾಡಿ ಹ್ಯಾಂಗ ಕುಣಿದಾಡತಾಳ ನೋಡ್ರಿ.

ಈ ನುಡಿಗಳಿಂದ 'ಚಂದ್ರಣ್ಣಾ' ಬಾಹ್ಯಲೋಕಕ್ಕೆ ಹೊರ ಬಂದು ನೋಡುತ್ತಾನೆ, ಸುಂದರ ಎದೆಯೊಡತಿ ಕಣ್ಮುಂದೆ ಮಂದಸ್ಮಿತದಿಂದ ತಣಿವಿನಲ್ಲಿ ನಿಂತಿದ್ದಾಳೆ. ಹೊರಗೆ ಬೆಳದಿಂಗಳಲ್ಲಿ ನಾಲ್ಕು ವರುಷದ ಮಗು, ಸುಮಾ "ಚಂದಪ್ಪ ಚಂದಪ್ಪ ಬಾ–ಬಾ, ಬಾರಿ ಹಣ್ಣ ಕೊಡತಿನಿ ಬಾ-ಬಾ" ಅಂತ ಕುಣಿದಾಡಿ ನಗುತ್ತಿದ್ದಾಳೆ.

ಇದನ್ನೆಲ್ಲ ನೋಡಿದ ಚಂದ್ರಣ್ಣನಿಗೆ ಹಿಗ್ಗು ಹಿರಿಸದೆ ತುಂಬಿ ಬಂದಿತು. ಕಣ್ಣಿನ ಕೊನೆ ಅಂಚಿನಿಂದ ನೀರು ಹೊರ

ಕಿಕ್ಕಿದವು. ಮಗುವನ್ನೆತ್ತಿಕೊಂಡು ಮನದಣಿಯಂತೆ ಮುತ್ತಿಟ್ಟನು.

ನಲ್ಲೆಯನ್ನು ಬರಮಾಡಿಕೊಂಡು ನಾಟಕಕ್ಕೆ ತೆರಳಿದನು ಚಂದ್ರಣ್ಣ.

ಅಲ್ಲಿ, ಹಾಸ್ಯಬಂದದಲ್ಲಿ ನಗೆಯಲ್ಲಿ ತೇಲುತ್ತಾನೆ, ಒಮ್ಮೊಮ್ಮೆ ಗಂಭೀರನಾಗುತ್ತಾನೆ; ಮತ್ತೊಮ್ಮೆ ರೋಸಿ ಹೋಗುತ್ತಾನೆ. ರಮ್ಯ ಮನೋಹರ ದೃಶ್ಯಕಂಡು, ನಲ್ಲೆಯತ್ತ ದೃಷ್ಟಿ ಹರಿಸಿ ಮಂದ ನಗೆ ನಗುತ್ತಾನೆ, ಪ್ರಣಯಿಯಾಗುತ್ತಾನೆ, ಬೆರಗು ಬಿಟ್ಟು ನೋಡುತ್ತಾನೆ, ವಿವಿಧ ಭಾವ-ಭಂಗಿ ತಳೆಯುತ್ತಾನೆ, ನಲಿಯುತ್ತಾನೆ. ನಾಟಕಕ್ಕೆ ಕೆಲ ಹೊತ್ತಿನ ಮೇಲೆ ಮಂಗಳವಿದೆ ಎನ್ನುವದನ್ನು ಮರತೇ ಬಿಟ್ಟಿದ್ದಾನೆ ಚಂದ್ರಣ್ಣ.

ಆನಂದನ ಆನಂದ

ಆನಂದನಿಗೆ ಜಗತ್ತೇ ಶೂನ್ಯವಾಗಿದೆ. ಮುಂದ ಬೆಳಕೂ ಕಾಣಿಸಲೊಲ್ಲದು. ಸುತ್ತೆಲ್ಲ ನೋಟ ಹರಿಬಿಟ್ಟರೆ...., ಕಾಳ ರಾತ್ರಿ! ಕಣ್ಣು ಕತ್ತಲೆಗೂಡಿದೆ. ಸುಖ ಕೇಗೆ ಮಾಡಿ ಕುಳಿತವನು ಮಾತ್ರವಲ್ಲ! ಸೋಂಕಿ ಬಿಟ್ಟ ರೋಗಿಸಿದಲ್ಲಿ ಸಾಸಿರ ಚೇಳು ಕುಟುಕಿದ ವೇದನೆ. ಮಾತನಾಡಲು ಬಾಯಿ ಬರಲೊಲ್ಲದು. ಶಿರದ ನರಗಳು ಬಿಟ್ಟವೋ 'ಅಪ್ಪಾ....' ಎನ್ನುವ ಸ್ವರ ಕಾಸಿದ ಸೀಸನ್ನು ಕಿವಿಯಲ್ಲಿ ಸುರುವಿದಂತೆ ಬೀಳತೊಡಗಿದೆ. ಏನೊಂದು ಶಬ್ದವಿಲ್ಲದ ಏಕ ಧ್ವನಿ ಎದೆಗೂಡನ್ನು ಕೊಡತೊಡಗಿದೆ. ಅಜ್ಜಿಯ ನಡುಗುವ ಹೃದಯದಲ್ಲಿ ಕಂಪನ ಹುಟ್ಟಿಸಿ ಇನ್ನಷ್ಟು ಉಗ್ಗಡ ಮಾಡತೊಡಗಿದೆ. ಅವಾಗಲೊಮ್ಮೆ ಹೊರಹೊಮ್ಮುವ ತಂದೆಯ ಮಾತುಗಳು, ಸಂತಸದ ತಳ ತಲುಪಲು ಸಹಾಯ ನೀಡತೊಡಗಿವೆ. ಹಿರಿಯರ ಗೆಳೆಯರ ಸಾಂತ್ವನ ನುಡಿಗಳು, ಕಾಯ್ದ ಹಂಚಿನಲ್ಲಿ ಬಿದ್ದ ನೀರಿನ ಗತಿ ಹೊಂದತೊಡಗಿವೆ. ಕಣ್ಣು ತೆರೆದು ನೋಡದಿದ್ದರೂ ಈ ವರೆಗೆ ಆನಂದದ ಹೊಳೆ ಹರಿಸಿದ ಮೂರ್ತಿ ಹೃದಯದಲ್ಲಿ ಮೂಡಿಸಿ ಉಪ್ಪು ನೀರಿನ ಸಾಗರ ಉಕ್ಕಿಸತೊಡಗಿದೆ! ಉಕ್ಕಿ-ಉಕ್ಕಿ ಚಿಲುಮೆಯಾಗಿ ಬಿಸಿನೀರು ನಿಟ್ಟುಸಿರಿನೊಂದಿಗೆ ಸ್ಪರ್ಧಿಸುತ್ತ ಚಿಮ್ಮತೊಡಗಿವೆ! ಕಡಕಷ್ಟದ ಕುಲುಮೆಯಲ್ಲಿ ಕುದಿದೂ ಕುದಿದೂ ಸಂತಾಪ ಪಾಕದಲ್ಲಿ ಸಮರಸ ಹೊಂದಿದ್ದ ಈ ನೋವು ಈ ನಲಿವುಗಳಾಚೆಯಲ್ಲಿ

ಶೂನ್ಯದ ಗರ್ಭದಲ್ಲಿ ಸಮಾಧಿಸ್ಥನಾಗಿ ತನಗರಿಯದಲೆ
ಕುಳಿತಲ್ಲಿಂದ ಹೊರಳಿದನು. "ಪದ ಕುಸಿಯೆ ನೆಲವಿಹುದ
ಮಂಕು ತಿಮ್ಮ" ಅನ್ನುವಂತೆ ಸರ್ವರಾಧಾರೆ ನೆಲದಾಯಿ
ಯೇಗತಿ ಆನಂದ ಕಾಣದ ತನುವಿಗೆ.

ನೆರೆದವರು **ಗಡಬಡಿಸಿ** ಶೀತೋಪಚಾರ ನಡಿಸಿದ್ದಾರೆ
ಮನೆಯಲ್ಲಿ **ಧ್ವನಿಸುವ ಕೂಸುಗಳ** ಹೊರತಾಗಿ ಉಳಿದವರ
ಜೀವದುಂಬಿದ **ಗೊಂಬೆಗಳಂತೆ** ಮಾತ್ರ ಕಾಣಿಸುತ್ತಾರೆ
ಒಮ್ಮೆಲೇ "**ಗಾಬರಿಯಾಗಬೇಡಿರಿ** ! ಏನೂ ಆಗಿಲ್ಲ ಉಸುಲ
ತಿರುಗಿದೆ" ಎನ್ನುವ **ಧ್ವನಿ** ಮನೆ ಒಳಹೊರಗೂ ತೂ
ತುಂಬಿತು. "ಹಾಂ...." ಎನ್ನುವದು ಮೆಲ್ಲನೆ ಬಹು ಮೆಲ್ಲನ
ಆನಂದನಿಂದ ಹೊರಬಂದಿತು. ತಂದೆಯಲ್ಲಿ ಹಾಗು ಗೆಳೆಯ
ರಲ್ಲಿ ಚೇತನೆ ಕಂಡುಬಂದಿತು.

"ಹೂಂ ತಡಮಾಡಬೇಡಿರಿ ಬರತಕ್ಕವರ ದಾರಿ ದೂ
ವಿದೆ, ಅದು ಸಾಧಿಸದು; ಕಲ್ಲಜ್ಜಿ ! ನೀನು ಈ ಹುಡುಗರನ್ನು
ಕರೆದುಕೊಂಡು ಮನೆಯಲ್ಲಿರು. ಪೂಜೆಗಳೆಲ್ಲ ಮುಗಿದವಲ್ಲ
ಎಬ್ಬಿಸಿರಿನ್ನು" ಎನ್ನುವದೊಂದೇ ತಡ 'ಲೀಲಾಳ' ಸ್ಮಶಾನ
ಯಾತ್ರೆಗಾಗಿ ನೆರೆದವರು ಎದ್ದರು. ಶವಕ್ಕೆ ಕಟ್ಟಿದ ಕಟ್ಟು
ಸಡಿಲಿಸಿದರು ಆನಂದ ಏನು ಮಾತಾಡುವನೆಂಬುದು ಆರಿಗೂ
ತಿಳಿಯಲೊಲ್ಲದು. ಏನೇನೋ ಚೀರತೊಡಗಿದ್ದಾನೆ! "
ಮನೆಯ ಶಾಂತಿಯನ್ನು ಹೊರ ಹಾಕತೊಡಗಿದ್ದೀರಿ; ಆನಂದನ
ಆನಂದವನ್ನು ಹೊತ್ತೊಯ್ಯತೊಡಗಿದ್ದೀರಿ.......... ನನ್ನ
ಆನಂದದೊಂದಿಗೆ ನನ್ನನ್ನೂ ಹೊಂದಿಸಿರಿ...." ಆರು
ಹೊಂದಿಸಬೇಕು ?! ನಡೆದದ್ದೆಲ್ಲ **ನಡೆದದ್ದೆಲ್ಲ** ಕಾಣದ

ಕೈಯ್ಯ ಕೆಚಳಕದಿಂದಲೇ ಎನ್ನುವದು ತಾನು ಅರಿತೂ ಅರಿಯದವನಾಗಿದ್ದಾನೆ. ಹುಚ್ಚನು ಅರೆ ಮನುಷ್ಯನಾದರೂ ಇದ್ದಿರಬಹುದು. ಈಗ ಆನಂದ ಮಾತ್ರ ಹುಚ್ಚನ ಸರಿ ನಿಲ್ಲ ಲಾರ. ಹೇಗೆ ನಿಂತಾನು........! ಈ ವರೆಗೆ ಏನೋ ಕಂಡಿದ್ದ ಇನ್ನೂ ಎಷ್ಟೋ ಕಾಣಬೇಕೆಂದಿದ್ದ; ಕಂಡದ್ದು ಕನಸಿನ ಮಾತಾಯಿತು. ಕಾಣಬೇಕಾದದ್ದು ಮರಳುಗಾಡಿನ ನೀರಾಗಿ ಹೋಯಿತು. ಸಧ್ಯ ಕಾಣುವದು ಶೂನ್ಯ ಮಾತ್ರ!

ಲೀಲಾಳ ನಲ್ಮೆಯಲ್ಲಿ, ಮಕ್ಕಳ ಲಾಲಿಯಲ್ಲಿ ತಂದೆ ಹಾಗು ಅಜ್ಜಿಯ ವಾತ್ಸಲ್ಯದಲ್ಲಿ ತಾಯಿಯನ್ನು ಮರೆತಿದ್ದನು. ಆ ಗಾಯ ಮುಗಿದು ಹೋಗಿತ್ತು ಇದು ಬೇಗ ಮುಗಿಯದ ಗಾಯವಾಯಿತು. ಮಗನ ಅಕ್ಕರೆ ಬಾಳು ಕಂಡು ಹಿಗ್ಗು ಹಿಡಿ ಸಲಾರದೆ ಎಂಬತ್ತು ವರುಷದ ಮುದುಕನಾದರೂ ಹರೆಯದ ಹುರುಪಿನಿಂದ ಹೊಲ ಮನೆ ಸಾಗಿಸುತ್ತಿದ್ದನು ತಂದೆ. ತಂದೆಗೂ ಮಿಕ್ಕಿದ ವಯಸ್ಸಿನವಳಾದ ಅಜ್ಜಿಯು, ನನ್ನ "ಮಗಳು ಈ ಚಂದ ಕಾಣದಿದ್ದರೂ ನಾನು ಕಾಣುವೆ" ನೆಂದು ಮಗಳನ್ನು ಮರೆತು; ಲೀಲಾಳಗೆ ಹೆಚ್ಚು ಕೆಲಸ ಹಚ್ಚುತ್ತಿರ ಲಿಲ್ಲ. ರಜೆಯ ಮೇಲೆ ಆನಂದ ಬಂದನೆಂದರೆ ದಿನಗಳು ಗಳಿಗೆಗಳಾಗುತ್ತಿದ್ದವು.

ಊರಿಂದ ಮನೆಯಲ್ಲಿ ಕಾಲಿಡುವದೊಂದೇ ತಡ ನೂರು ವರ್ಷದ 'ಅಂಜಲಿ' "ಅಪ್ಪಾ ಬ.... ಬಂದ- ಬ್ಯಾಂಗಡಿ ತಂದ" ಎಂದು ತೆಕ್ಕೆ ಬೀಳುವಳು ಬ್ಯಾಂಗಡಿ ಯೆಂದರೆ 'ಚ್ಯಾಕಲೇಟು' ತಂದು ಕೊಟ್ಟ ದೂಥಿ. ಒಂದು ವರುಷದ 'ಲತಾ' ಅಂಬೆಗಾಲಿಕ್ಕುತ್ತ ಸಾಗರ ಬಿದ್ದು ಬಂದ

ಕೋಟಿಸತ್ತ ಕೈವಾಡುವಳು. ಆಡಲು ಹೋದ ' ಜಯಾ '
ಬಂದು " ಅಪ್ಪಾ ! ಚಾಕಲೇಟ ಕೊಡು " ಎಂದು ದುಂಬಾಲ
ಬೀಳುವಸು. ಎಲ್ಲರಿಗೆ ಕೊಟ್ಟು ಕುಳಿತನೆಂದರೆ ತೀರಿತು,
ನಾಕವೇ ನೆಲಕಿಳಿದು ಬಂದಂತೆ ಆಗುತ್ತಿತ್ತು. ಹೊಲದಿಂದ
ಮನೆಗೆ ತಂದೆ ಬಂದರೆ ವಾತ್ಸಲ್ಯಪೂರಿತ ನುಡಿಯಲ್ಲಿ
ಮಿಂದಿದ್ದು ಇನ್ನೂ ಚೇತನ ತುಂಬಿದವನಾಗುತ್ತಿದ್ದ. ಇದೆಲ್ಲ
ಶಾಂತವಾದ ವಾತಾವರಣ ಸೇವಿಸುವ ಆನಂದನಿಗೆ, ಬಾಳಿನಲ್ಲಿ
ಬೆಳಕಿದೆ, ಶಾಂತಿಯಿದೆ ಜೀವಿತವು ಅರ್ಥಪೂರ್ಣವಾಗಿದೆ ಎಂದು
ಅನಿಸುತ್ತಿತ್ತು. ಈ ಹೊತ್ತು ಇವುಗಳನ್ನೆಲ್ಲ ಮೃತ್ಯು ಕಬಳಿ
ಸಿತ್ತು. ಅರ್ಥವಿಹೀನವಾದುದು, ಅಶಾಂತಿಯ ತವರಾದುದು
ಪ್ರತ್ಯಕ್ಷವಿತ್ತು.

ಹುರುಪು – ಹುಮ್ಮಸ ದುಃಖ–ದುಮ್ಮಾನ ಏನೂ
ಇಲ್ಲದ, ಅರಿಗೂ ಕಾಯ್ದುರಿಸಿದ ತಾಣದೆಡೆಗೆ ಲೀಲಾಳ
ಯಾತ್ರೆ ಹೊರಟಿದೆ. ತರುಣನಾದರೂ ಆನಂದನಲ್ಲಿ ನಡೆಯಲು
ತ್ರಾಣ ಇಲ್ಲದಾಗಿದೆ. ಅಸ್ತವ್ಯಸ್ತವಾದ ಕೂದಲುಗಳು ದುಃಖ
ದಲ್ಲಿ ನಾವೂ ಭಾಗಿಗಳೇ ಎನ್ನುವಂತೆ ಕಾಣಿಸುತ್ತಿದ್ದವು.
ಗೆಳೆಯರಮೇಲೆ ತನ್ನ ಭಾರಹೇರಿ ಭಾರವಾದ ಹೃದಯ
ಹೇಗೋ ಹೊತ್ತುಸಾಗಿದ್ದ. ಅಯ್ಯೋ........ ಅನ್ನುವ ಶಬ್ದ
ವಲ್ಲದೆ ಮತ್ತೊಂದು ಆತನಿಂದ ಬರದಾಗಿದೆ. ಲೀಲಾ
ಅಂತಿಮ ದರ್ಶನಕ್ಕೆ ನೆರೆದ ಜನ ತಮ್ಮ ಭಾವಭಂಗಿಯಿಂದ
ಸಹಾನುಭೂತಿ ವ್ಯಕ್ತಮಾಡುವದು ಮಾತ್ರ ಆತನಿಗೆ ಕಾಣ
ತ್ತಿತ್ತು. ದುಃಖವೇ ನಡೆತಂದು ಗಂಟುಗಟ್ಟಿ ಮುಟ್ಟಿತು
ಎನ್ನೇನು ಅಷ್ಟರಲ್ಲಿ ಲೀಲಾಳ ಮುಖ ಮುಚ್ಚಿತ್ತು. ಕಣ್ತುಂ

ನೋಡಿದ, ನೋಡೇ ನೋಡಿದ. ನೋಡು ನೋಡುತ್ತಲೇ ನೆಲಕ್ಕುರುಳಿದ. ಆನಂದನನ್ನು ಎಚ್ಚರ ಗೊಳಿಸುವದೂ ಮಣ್ಣು ಮಾಡುವದೂ ಒಮ್ಮೆಲೇ ನಡೆದವು. ಈ ಲೋಕಕ್ಕೆ ಹೊಸ ಬನೆನ್ನುವಂತೆ ನಿಧಾನಿಸಿ ಎದ್ದ. ಮೂರು ಹಿಡಿ ಮಣ್ಣು ತಾನೂ ಮಾಡಿದ "ಗೋಳಿನ ಸಾರವೂ ಬೇಕು" ಎಂದು ನೀನು ಬಿಟ್ಟು ನಡೆದಿಯಾ? ಗೋಳೇ ಇರಲಿ ಏನೇ ಇರಲಿ ನಿನ್ನಪಾಲಿನದು. ಆಕೆಯಿಲ್ಲ ನೀಗಿ ಹೋದಳು. ಏನೆಂದರೂ ಬಾರದು. ಆದದ್ದು ಆಗಿ ಹೋಯಿತು. ಆಗುವದು ನಿನಗಾಗಿ ಎಡೆ ಮಾಡಿದೆ. ಒಲ್ಲೆಂದರೂ ಬಿಡದು. ಬಂದದ್ದು ಉಣ್ಣಬೇಕಲ್ಲ. ಇನ್ನು ಮಕ್ಕಳಲ್ಲಿ ಎಲ್ಲ ಕಾಣುತ್ತ ಕಾಲುಕಳೆ. ಅತ್ತು-ರಾಗುವದೇನು? ಮುಪ್ಪಿನ ತಂದೆ ಹಾಗು ಅಜ್ಜಿಗೆ ಹೆಚ್ಚಿನ ದುಃಖ ಕೊಟ್ಟಂತಾಗುವದು. ನೀನು ಮಾತ್ರ ಅಳುವನ್ನು ಮರೆ. ಮರೆಯುವದೂ ಕಷ್ಟ, ನುಂಗಿಕೊ, ದಿವಸ ಹೋದಂತೆ ತಾನೇ ಮರೆಯುವದು. ಸಣ್ಣಮಕ್ಕಳು, ಮನೆಯಲ್ಲಿ ಜೋಕೆ ಮಾಡಲು ಹೆಚ್ಚು ಜನರಿಲ್ಲ. ಕಷ್ಟವಾಗುವದು ಸಹಜವಿದೆ, ಮಾಡುವದೇನು? ಸ್ಮಶಾನ ವೈರಾಗ್ಯ ನುಡಿಯಿಂದ ದುಃಖ ನುಂಗಿಕೊಂಡು ನೀರಿನೆಡೆಗೆ ಎಲ್ಲರೊಡನೆ ನಡೆದನು.

ಮಂದಿಯ ಬಲುಮೆಗಾಗಿ ಕಣ್ಣೀರೊಡನೆ ಅನ್ನವನ್ನು ನುಂಗಿ ಮನೆ ಸೇರಿದ. ಬಣಬಣವೆನಿಸತೊಡಗಿದೆ, ಎತ್ತ ನೋಡಿದರೂ ಏನೋ ಕಾಣಿಸಹತ್ತಿದೆ. ಅಮಂಗಲ ಹೊರತಾಗಿ ಮತ್ತೇನು? "ಅಪ್ಪಾ" ಎನ್ನುವ ಅಜಂಲಿ ನೋಡನ. ತೆರೆದ ಬಾಗಿ ಮುಚ್ಚಲಾರದ ಲತಾ. ತೊಡೆಯಮೇಲೆ ಜಯಾ ಅತ್ತೂ ಅತ್ತೂ ಇದ್ದೇ ತಾನೆ ಮಲಗಿದ್ದಾನೆ. ಆನಂದ ಅಂಜ-

ಲಿಗೆ ಬಿಸಕತ್ತು ಕೊಟ್ಟು ನಾಳೆ ನಿಮ್ಮವ್ವ ಬರುವಳು ಎಂದು ಹೇಳಿ ರಮಿಸಿದ. ಆದರೆ....ಲತಾ....ಚಮುಚೆಯಿಂದ ಹಾಲು ಹಾಕಿದ ಮೇಲೆ ರೋದನ ತಡೆದಳು.

" ಮಗು ದುಃಖಿಸಬೇಡ, ಇನ್ನು ಲೀಲಾಳು ನಮಗೆ ಏನು ಮಾಡಿನರೂ ಸಿಕ್ಕಳು. ಸರಿರಾತ್ರಿಯಾಗುತ್ತ ಬಂದಿತು. ತಿಳಿದವನಿದ್ದೂ ಹೀಗೆ ಕುಳಿತರೆ ಮುಂದೆ ಹೇಗೆ ? " ತಂದೆಯ ಕರುಣೆಯ ಸ್ವರದಿಂದ ಮಕ್ಕಳನ್ನು ಮುಂದಿರಿಸಿಕೊಂಡು ಅಡ್ಡಾದನು.ತಂವೆ ಅಜ್ಜಿಯರೂ ಮಲಗಿಕೊಂಡರು. ಕಹಿ ಸಿಹಿ ಗುಳಿಗೆ ನುಂಗಿ ಅವರಿಗೆ ಅನುಭವವಿತ್ತು. ಅಲ್ಲದೆ ಹಿಂದಿನ ದಿನದಿಂದ ನಿದ್ರೆ ಇರಲಿಲ್ಲ ಹೀಗಾಗಿ ಆವರಿಗೆ ಜಂಪುಹತ್ತಿತು.

ಆನಂದನು ತನ್ನಲ್ಲಿ ಎಷ್ಟು ಸಮಾಧಾನ ತಂದು ಕೊಂಡರೂ ದುಃಖ ದೂರಾಗದಾಗಿದೆ. ಹಿಂದಿನ ಒಂದೊಂದೇ ನೆನಪು ಮರುಕಳಿಸಿ ಕಿಚ್ಚುಹೊತ್ತಿಸಿ ಉರಿಸತೊಡಗಿದವು. ಜಿನುಗು ಹಿಡಿದ ಲ್ಯಾಂಪನ್ನು ಎತ್ತರಿಸಿದನು, ಬರೆ ವೈರಿಯಿಂದ ಮಲಗಿದ ಮಕ್ಕಳು ಆ ಬೆಳಕಿನಲ್ಲಿ ಇನ್ನೂ ಬಿಳುಪಾಗಿ ಕಾಣು ತ್ತಿದ್ದವು. ನೋಡು ನೋಡಿದಂತೆ ವಿಚಿತ್ರ ದೃಶ್ಯ ! ಲೀಲಾಳೇ ಮೂರು ತೆರನಾದ ರೂಪಿನಲ್ಲಿ ಕಾಣತೊಡಗಿದ್ದಾಳೆ ಆ ಲತೆ ಯಲ್ಲಿ ಮೂಡಿಬಂದ ಮಿಡಿಗಾಯಿಗಳಲ್ಲವೆ ?

ಫಲನೀಡಿ ಹುಡಿಗೂಡಿ ಹೋದೆಯಾ ! ಬಡ ಶಿಕ್ಷಕ ನಾದರೂ ದೊರೆವ ಸಂಬಳದಲ್ಲಿ ಸ್ವರ್ಗಸುಖ ಕಂಡೆವು. ತರ- ಬೇತು ಆಗದೆ.... ಪ್ರಗತಿ ಇಲ್ಲ.... ಪೂರ್ಣ ವೇತನವಿಲ್ಲದೆ.... ತೃಪ್ತಿಇಲ್ಲ....ಶಿಷ್ಯವೇತನ ಕೇವಲ ಇಪ್ಪತ್ತೈದು. ಹೊಟ್ಟೆ ಬಟ್ಟೆಗೆ ಸಾಲುವಂತಿಲ್ಲ.... ನಿನಗಾಗಿ ಕೊಟ್ಟದ್ದು ಮುದ್ದು ....

ಮುದ್ದಿಗೆ....ದುಡ್ಡೆಲ್ಲಿ ? ಇದನ್ನೆಲ್ಲ ನೀನು ಅರಿತವಳೆಂದೇ ನನ್ನನ್ನು ಸಮಾಧಾನದಲ್ಲಿರಿಸಿದೆ....ಬಂದವರೊಡನೆ ಹಾಯಾಗಿದ್ದೇನೆಂದು ಹೇಳಿ ಕಳಿಸುತ್ತಿದ್ದೆ. ಬಂದು ನೋಡಿದಲ್ಲಿ ಇರುವದೊಂದು ಜೇರಿ. ಅಂತ್ಯದ ವರೆಗೂ ನನ್ನ ಹಿತವನ್ನೇ ಕೋರಿದೆ. ನನಗಾಗಿ ಬೆಂದು ಬೇಗುದಿಗೊಳ್ಳುವದನ್ನು ತೀಡು ನನ್ನ ಧೈರ್ಯ ಹೆಚ್ಚಿಸುತ್ತಿದ್ದೆ. ಏನು ನಿನ್ನ ಒಲ್ಮೆ! ಏನು ನಿನ್ನ ನಲ್ಮೆ! ನಾನೇನು ನಿನ್ನನ್ನು ನೋಡಿ ವರಿಸಿದ್ದಿಲ್ಲ. ಹುಡುಗತನದಲ್ಲಿ ಹಿರಿಯರೇ.... ಕಣ್ಣಲ್ಲಿ ನೀರು ಮಟಿಯುತ್ತೊಡಗಿದವು. ಕೊನೆಗೆ ನಿನ್ನದೊಂದು ಬಯಕೆ ಈಡೇರಿಸಬಾಗಲಿಲ್ಲ. ನಮ್ಮಿಬ್ಬರ ಫೋಟೊ ಇರಲೆಂದೆ. ನಿರಂತರ ನಮ್ಮಿಬ್ಬರ ಬಿಂಬ ಒಂದೆಡೆ ಕೂಡಿರಲೆಂದೇ ನಿನ್ನಿಚ್ಛೆ! ನನಗೇ ಅರ್ಥವಾಗಲಿಲ್ಲ.

ಈಗಂತೂ ಆನಂದ ಮೂಕನಾದ. ಆವುದೋ ದೀರ್ಘ ವಿಚಾರದಲ್ಲಿ ಇಳಿಯುತ್ತಿದ್ದಂತೆ ಕಾಣುತ್ತಿತ್ತು. ಕುಳಿತವನೇ ದಿಗ್ಗನೆದ್ದ. ಹುಚ್ಚನಂತೆ ಏನೋ ಹುಡುಕಹತ್ತಿದ. ಕೊಠಡಿಯೊಂದರಲ್ಲಿ ಹೋದವನು ಕೈಯಲ್ಲಿ ಹಗ್ಗ ಹಿಡಿದುಕೊಂಡು ಹೊರಬಂದ. ಮಕ್ಕಳನ್ನು ಮತ್ತೊಮ್ಮೆ ಮುದ್ದಿಟ್ಟ. ಮೊಗ-ಸಾಲೆಗೆ ಬಂದು ಹಿರಿಯರ ಪಾದದಡಿಯಲ್ಲಿ ಕುಳಿತು ನಾಲ್ಕು ಹನಿ ಕಣ್ಣೀರು ಕರೆದ. ದುಃಖ ಜಲದಿಂದ ಅವರ ಪಾದತೊಳೆದ. ನಿಡಿದಾದ ಉಸುರೊಂದು ಬಿಟ್ಟ.

“ ಈ ವರೆಗೆ ಸಂಸಾರ ಭಾರ ಹೊತ್ತು ಬಳಲಿದ ದೇಹಗಳಿಗೆ ಇನ್ನೂಭಾರ ! ”

ಆನಂದನ ಮೈ ನಡುಗಿತು. ನಿಧಾನದಿಂದ ಅಲ್ಲಿಂದೆದ್ದು ಒಳಗೆ ಬಂದ.

“ ಇನ್ನೆಲ್ಲಿಗೆ ಹೋಗುವೆ ಲೀಲಾ ? ನಿನ್ನನ್ನು ಬಿಟ್ಟಿರಲು ನನಗೆ ಸಾಧ್ಯವೆ ? ಬಂದೆ ನಿನ್ನ ಕರೆಗೆ ಮನ್ನಣೆಯಿತ್ತೆ. ಇದೋ ಈಗಲೇ....”

ಎಂದವನೇ ಕಾಲಬುಡದಲ್ಲಿದ್ದ ಒಂದು ಪೆಟ್ಟಿಗೆಯನ್ನು ಎತ್ತಿತಂದ. ಅದರ ಮೇಲೇರಿದ. ಇದರಿಂದ ಮೇಲಕ್ಕೆ ಏರುವ ಉತ್ಕಟೇಚ್ಛೆ ಅವನಲ್ಲಿ ತುಂಬಿತ್ತು. ಅಷ್ಟರಲ್ಲಿ ಟ್ರೇನಿಂಗ ಕಾಲೇಜದ ಪ್ರಾರ್ಥನೆಯ ಗಂಟೆ ಗಣ ಗಣ ಗಣ ಬಾರಿಸಿತು.

ಆನಂದ ಎಚ್ಚತ್ತು ನೋಡುತ್ತಾನೆ. ತಾನಿದ್ದುದು ಕಾಲೇಜದ ವಸತಿಗೃಹ. ಗೆಳೆಯರೆಲ್ಲ ಪ್ರಾರ್ಥನೆಗೆ ಹೊರಟು ಹೋಗಿದ್ದಾರೆ. ತಾನೂ ನಿಧಾನಿಸಿ ಎದ್ದು ಮುಖ ತೊಳೆದು ಕೊಂಡು ಪ್ರಾರ್ಥನಾ ಮಂದಿರ ಸೇರಿದ. ಎಂದಿಗಿಂತ ಉತ್ಸಾಹ ದಿಂದ ಭಜನೆ ಮಾಡಿದ. ತಾನುಕಂಡ ಕನಸನ್ನು ಗೆಳೆಯರಿಗೆ ಹೇಳಿದ “ ಇಂತಹ ಕನಸುಗಳು ಶುಭವನ್ನು ಸೂಚಿಸುತ್ತವೆ” ಎಂದು ಗೆಳೆಯರಿಂದ ಕೇಳಿ ಮತ್ತೂ ಆನಂದಿತನಾದ ಆನಂದ.

ಈ ಕನಸು ಕಂಡು ಇಂದಿಗೆ ಎರಡು ವರುಷಗಳು ಸಂದಿವೆ. ಈಗ ಆನಂದ ನಿಜವಾಗಿಯೂ ಆನಂದದಲ್ಲಿದ್ದಾನೆ. ಮುಂದಕ್ಕೆ ಎಳೆದು ಕೊಳ್ಳಲು ಕೂಡ ಬಾರದ ‘ ಲೀಲಾಳ’ ಕಾಲುಗಳು ಇಂದು ಬಂದಿವೆ. ಸಲೀಸಾಗಿ ನಡೆದಾಡುತ್ತಿದ್ದಾಳೆ. ನಾಲ್ಕು ವರುಷಗಳ ಅವಧಿಯಲ್ಲಿ ಚುಚ್ಚು ಮದ್ದುಗಳು ತೀರಿದವು. ಕೈಯಲ್ಲಿ ಕಾಸೂ ಉಳಿಯಲಿಲ್ಲ. ದೇವ್ರಗಳ ಕಾಟ ಕಡೆಗಾಯಿತು. ಮಾಟಗಳು ಮಾಯವಾದವು. ಎಲ್ಲ ಸುಳ್ಳಾದವು. ಒಂದೊಂದು ವರುಷ ಕಾದಿದವು. ಹಿರಿಯರಿಗೆ ಬಡಿದು

ಕೊಂಡ ಭೂತವೋ ತಿಳಿಯಲಿಲ್ಲ. ಹಣವಿಲ್ಲದೆ ರೋಗವಾಸಿಯಾಗಬೇಕಾದರೆ.... ಏನಾದರೊಂದು ಗೊಂದಲಕ್ಕಿಟ್ಟುಕೊಳ್ಳಬೇಕು. ದೇವರ ಮೇಲೆ ಹೊರೆಹಾಕಿ ಕಾಲತಳ್ಳಬೇಕು. ಎಲ್ಲ ಕ್ರಮಗಳೂ ಮುಗಿದವು. ಕೊನೆಗೆ ' ಕ್ಷ ' ಕಿರಣದ ಮೊರೆ ಹೊಕ್ಕಾಯಿತು. ' ಎಲುವಿನ ಕ್ಷಯ ' ವೆಂದು ಗಾಬರಿ ಹುಯ್ಯುಕೊಂಡದ್ದೂ ಆಯಿತು. ಬಾವು ಒಂದೆಡೆಯಾದರೆ ಬರೆಯಿನ್ನೊಂದೆಡೆ ಯಾಗುತ್ತ ಸಾಗಿತ್ತು. ಈ ಜನ್ಮದಲ್ಲಿಯೇ ನರಕಯಾತನೆ ಅನುಭವಿಸಿ ಸ್ವರ್ಗದ ಬಾಗಿಲಿಗೆ ಬಂದು........ ಮುಟ್ಟಿದಳು. ಕಾಡುವದು ಹಿಂಡಾದ ಮೇಲೆ ಅದು ಅನುಕೂಲ ಕಾಲ ಮುಂದಾಗುತ್ತ ಸಾಗುವದೇನು ಸುಳ್ಳಲ್ಲ.

ಆನಂದನಿಗೆ ಈಶ್ವರನ ಗೆಳತನವಾದದ್ದು ಕಾಲೇಜದಲ್ಲಿಯೇ. ಈಶ್ವರನ ಹೇಳಿಕೆಯಂತೆ ಪಟ್ಟದ ದೇವರ ಪಾದ ಭೆಟ್ಟಿ ಮಾಡಿಸಿದ್ದೇ ಇಂದು ಲೀಲಾ ನಡೆದಾಡಲು ಕಲಿತದ್ದು. ಅವರು ಮೃತ ದೇಹ ಮುಟ್ಟಿದರೂ ಚೇತನ ತುಂಬಿ ನೆಗೆದಾಡಬೇಕು. ಇದು ಸತ್ಯವಾದ ಮಾತು. ಕೊರಡನ್ನು ಹೋಲುವ ಕಾಲುಗಳು ಈಗ ಜೀವತುಂಬಿ ನಡೆದಾಡುವದೇ ಸಾಕ್ಷಿ. ಡಾಕ್ಟರರಿಂದ ನೀಗದ ಎಷ್ಟೋ ರೋಗಿಗಳು ಅವರ ಕೃಪಾದೃಷ್ಟಿಯಿಂದ ಆರೋಗ್ಯವಂತರಾಗಿ ಬಾಳು ನಡೆಸಿದ್ದಾರೆ. ಅವರು ಪವಾಡ ದೃಶ್ಯ ತೋರಿಸುವದು, ನಾಡಿಯ ಪರೀಕ್ಷೆಯಲ್ಲಿ ಮಾತ್ರ. ಅವರ ಪರೀಕ್ಷೆಯೆಂದರೆ ' ಕ್ಷ ' ಕಿರಣ ಬಿಟ್ಟ ಹಾಗೆ. ಆಯುರ್ವೇದ ಔಷಧ ಕೊಟ್ಟು ಗುಣ ಪಡಿಸುವರು ಹೇಳಿಕೆಯಂತೆ ನಡೆದರೆ ತೀರಿತು. ಹೇಳಿದಂತೆ ಗುಣಹೊಂದುತ್ತ ಹೋಗುವದು.

ಇಂದು ಆ ಮಹಾತ್ಮರ ಕೃಪಾಶೀರ್ವಾದದಿಂದ ಮತ್ತೊಂದು ಮಗುವನ್ನು ಎತ್ತಾಡಿಸುವ ಕಾಲ ಸಮೀಪಿಸಿದೆ. ಆನಂದನಿಗೆ ಬಾಳು-ಬೀಳೆಂದು ಬಗೆದ ಆನಂದ ಅದರಲ್ಲಿಯೇ ಅಪ್ರತಿಮ ಸುಖ ಕಾಣ ತೊಡಗಿದ್ದಾನೆ. ಇಂದು ಅವನ ಅನುಗ್ರಹಗಳೆಲ್ಲ ಚೆನ್ನಾಗಿವೆ. ಈಗ ಆತ ಪರಮಸುಖಿ.

ಕರ್ತವ್ಯಕ್ಕೆ ಕೈ ಹಾಕಿದಾಗ

"ನನ್ನೊಡೆಯಾ ಒಂತುಣಕ ರೊಟ್ಟೀ ನೀಡ್ರಿ" ತಿರುಕ ಮಲ್ಲನು ಸಾವುಕಾರ ಲಿಂಗಪ್ಪ ತಿರುಪೆಯರ ಮನೆಸೇರಿ ಹೋಗಿ ಬರುವ ಮುಂಚೆ, ಆತನು ಹಿಡಿದುಕೊಂಡು ಬಂದುದನ್ನು ನೋಡಿದರೆ, ಅಚ್ಚರಿ! ಆತನ ಜೋಳಿಗೆಯಲ್ಲಿ ಸೇರೆಂಟು ತುಣುಕು ರೊಟ್ಟಿ ಬೀಳದಿದ್ದರೂ, ಗುದ್ದಲಿ ಮಾತ್ರ ಕೈಗಬ್ಬೀರಿತ್ತು. ಕಂಡವರು ಗುದ್ದಲಿಧಾರಿ ಮಲ್ಲನನ್ನಲ್ಲ! ಹೃದಯ ಪರಿವರ್ತನೆ ಹೊಂದಿ ಶ್ರಮಜೀವಿಯಾಗಲು ಉಲ್ಲಾಸ ತಾಳಿದ ಮಲ್ಲನನ್ನು.

ನಾಗರ ಪಂಚಮಿಯು ಬರುವ ವಾರವದು. ಜಡಿಮಳೆ ಸುರಿಯುತ್ತಿದೆ. ಗಾಳಿ ಬೀಸುತ್ತಿದೆ. ಮೈಯಲ್ಲಿ ಹರಿದ ಬಟ್ಟೆ, ತರುಣನಾದರೂ ನಡುಗ ಹಿಡಿದಿದ್ದಿತು. ತನ್ನ ಹೆಂಡತಿಗಾದರೂ ಏನಾದರೂ ಈ ಹೊತ್ತಿನ ಹೊಗ್ತಿ ಒಕ್ಕಿರಬೇಕೆಂದು ದಾರೀ ತುಳಿಯತೊಡಗಿದ್ದ; ತಂಪು ಗಾಳಿಯು ಮೈ ತೊಯಿಸುವನು ಬೇಡವಾಗಿತ್ತು. ತೀವ್ರವಾಗಿ ಬೀದಿ ಬಸವನ ಕಿರಿಗುಡಿ ಸೇರಿದ. ಒಂದು ಮೂಲೆಗೆ ಆತು ಕುಳಿತ. ತಂಪುಗಾಳಿಯು ಅಲ್ಲಿದಾಟ ನಿಂತಿರಲಿಲ್ಲ. ತಾನು ಮುಂದೆ ಹೋಗುವ ಮಾರ್ಗದತ್ತ ಕಣ್ಣಿಟ್ಟು ಬಿಟ್ಟು, ಏನನ್ನೋ ವಿಚಾರಿಸುತ್ತ ಕುಳಿತವನು ತಾಸು ಗತಿಸಿದರೂ ಅಲುಗಾಡದೆ ಕುಳಿತೇ ಬಿಟ್ಟ. ತಾನು ತೆರೆದ ಕಣ್ಣಿನವನಾದರೂ ಮುಂಬರುವ ವ್ಯಕ್ತಿಯನ್ನು ಕಾಣದಾಗಿದ್ದನು, ಬರುವ

ವ್ಯಕ್ತಿಯಾದನೋ, ತಿರುಕನ ಸ್ಥಿತಿಹೊಂದಿ ಬೇಜಾರಪಟ್ಟು ನಡಗುತ್ತಾ ಅದೇ ಗುಡಿ ಬಳಿಸಾರಿತು. ತಿರುಕನು ಮುಗುಳ್ನಗೆ ಯಿಂದ.

"ಆ ಊರ್ಗಿ ಹ್ವಾಗಿದ್ದಕ್ಕ ಏನಾರ ಸಿಕ್ತ್ಯ ?"

"ಸಿಕ್ಕಾವ್ರ ಕೈಲನ್ನಿಕೊಂಡು ಸಾಕಾಗ್ಹೋತು, ಇಟ್ಟು ಬೊಟ್ಟುಸಿಗ್ಬೇಕಾದ್ರ........"

"ನಾವನಿಸ್ಕೊಳ್ಳೋದು ನಮ್ಮನಿಬಾಗ್ಲತಿ ಅದಕೇನಾತ್ರ ಹೋದು. ನಾಯಿ ಚೂ ಬಿಟ್ಟಿಕೊಂಡು ಹಾಂಗss ಬಂದ್ವಿ ನಿನ್ಹಾರ ತುಸು ಸಿಕ್ಕೈತೇನಂತ ?"

"ಜಪ್ಪಾತಳ, ನಿಂದ್ಹಿಂಗ ಬಾರೀ ಗಾಬಾ"

ಮಾತಿನ ಕೊನೆಗೆ, ತನ್ನ ಹೆಂಡತಿ ತಂದಿರುವ ಅನ್ನವನ್ನು ಇಬ್ಬರೂ ತಿಂದುದಾಯಿತು. ಜಡಿಮಳೆ ತಂಗಾಳಿ ಎರಡೂ ಇಲ್ಲದಾಗಿದ್ದವು! ಆ ಹೊತ್ತಿನಲ್ಲಿ, ಜೊತೆಯಾಗಿ ನೆರೆಯ ಊರಿಗೆ ತಂಗಲು ತೆರಳಿದರು. ಸಂಗಾತಿ ಕೂಡ ಮೌನವಾಗಿ ನಡೆಯುವದು ಸಾಧ್ಯವಾಗದೆ, ಮಾತಾಡಲು ತೊಡಗಿದ.

"ಇಗಾ ನಾಳ್ಕಿಂದ ಬೇಡ್ಕೊಂತಿನ್ನುದ್ವಲ್ಲಾ ಬೈಗ್ತಿ"

ಮಾತಿನಲ್ಲಿ ಜುಗುಪ್ಸೆ ಅವಿತುಕೊಂಡಿತ್ತು. ಅನುಭವವೂ ತುಂಬಿಕೊಂಡಂತ್ತಿತ್ತು.

"ಹೊಟ್ಟ್ಯಾಂಗ ತುಂಬೇಕ ನಂಗೇಳ ?"

"ಊರಾಗ ಮನಿ ಕಟ್ಕೊಂಡಿರೊ ಮಂದ್ಯಾಂಗ ದುಡಿತಾರ ಹಾಂಗ ದುಡಿದ್ರಾತು."

"ನಮಗ್ಯಾರ ದುಡ್ಯಾಕ ಕರಕೊಂತಾರ ನೀ ಬಲೇ ಹೇಳಾವ"

" ನಮಗೇನ ಕಸು ಇಲ್ಲೇನ ? ಯಾರರ ಹಚ್ಚಾಕ್ಯಾರs"

" ಮೊದಲಿಂದ ಬೇಡ್ಕೊಂದ ತಿನ್ನೂದ ನಮ್ಮ ನಸೀಬ ದಾಗೈತಿ ಕುಬ ಕಸುಬಾಗೈತಿ. ಮುಂದ್ಯಾಂಗ ಬಿಡಬೇಕು ? ನಮಗೇನಾಗೇತೀಗ ಬಿಡಲ್ಲಾಕ. "

" ಏನಾರ ಆಗ್ಬೇಕ ನಿನಗಿಶಾ. ಮನಿ-ಮನಿ ತಿರಿಗ್ದಾಗ ಒಂತುಣ್ಕ ರೊಟ್ಟಿ, ಅದೂ ಬೇಸ್ಕೊಂಡ ಅನಿಸ್ಕೊಂಡಾಗ "

" ಬೇಸ್ಕೊಳ್ಳಾರ್ದ ಹ್ಯಾಂಗ ಬದ್ಕೇಕ್ಮತ್ತ ? "

ಹೆಂಡತಿಯ ಧ್ವನಿಯಲ್ಲಿ ದೃಢತೆ ನೆಲೆನಿಂತುದು ಕಾಣಿ ಸುತ್ತಿತ್ತು. ಬೈಗಳಿಗೆ ಬೆಲೆ ಆಕೆಯಲ್ಲಿ ಇಲ್ಲದ್ದೂ ನಿಚ್ಚಳಾಗಿ ಈ ಮಾತಿನಿಂದ ತೋರುತ್ತಿತ್ತು. ಇದನ್ನು ಸಹಿಸದೆ ತಿರುಕನು

" ನಿಂಗೇನ್ಗೊತ್ತಾಕ್ಕೈತಿ. ಊರಾಗಿರಾವ್ರಗೇನು ದುಡಿ ಲಾದುಡ್ಡ ಬರ್ತೈತಿ ? ನಮ್ಮ್ಯಾಂಗs ಏಟ್ಮಂದಿ ನೀಡಿಸ್ಕೊಳವ್ರ ಭೂಮ್ಯಾಗವಾರ- ಯಾರಿಗೊತ್ತ ದುಡದ್ಮಂದಿ ಹಂತ್ಯಾಕ ಎಲ್ಲಾರೂ ಜೋಳ್ಗಿತಕ್ಕೊಂಡ ನಿಂದ್ರುವ್ರ; ಅವರ್ಯಾರ ಏನ್ಮಾಡ ಬೇಕು. ಅದ್ಕೂ ಬಿಡ ಕಡಿಕ, ತಿರಿಗ್ಯಾಡ್ಲಾರ್ದ ಬರ್ತೈತಿ. ದುಡ್ಕೊಂ ತಿಂದ್ರು ಒಂದ್ಕಡಿ-ಯಾರ ಇರುದಾಗ್ತೈತಿ. "

ತಿರುಕ ದಂಪತಿಗಳು, ಸಂಭಾಷಣೆಯೊಂದಿಗೆ ತಂಗುವ ಊರು ತಲುಪಿದರು. ಊರ ಹೊರ ಗುಡಿಯೊಂದರಲ್ಲಿ ವಸ್ತಿ ಮಾಡಿದರು. ಆತನ ಹೆಂಡತಿ ಮಾತ್ರ ನಿದ್ದೆ ಹೋದಳು. ತಿರುಕನಿಗೆ ನಿದ್ರೆಯ ಸುಳುವಿಲ್ಲದಾಯಿತು. ತಮಗೆ ಬಿಕ್ಷೆ ದೊರೆ ತರೂ ಶ್ರಮವಿಲ್ಲದೆ ಸಾಧ್ಯವಿಲ್ಲ. ತಾವು ಹೊಂದುವ ಶ್ರಮವು ಅರ್ಥಹೀನವಾದುದು. ಎಷ್ಟೊಂದು ಸುಂದರಮನೆ, ತೊಡಲು

ಬಟ್ಟೆ, ಸವಿಯಲು ಸವಿಯಾದ ಖಾದ್ಯ ಪದಾರ್ಥಗಳು ಅವರಿಗೆ ತಮ್ಮಿಂದ ತಾವೇ ಬಂದವುಗಳಲ್ಲ. ಇದು ಅವರ ಪರಿಶ್ರಮ ಪಟ್ಟ ಫಲ ವೆಂಬುದು ಆತನು ತೀರ್ಮಾನಿಸಿದನು. ಇಷ್ಟಾದರೂ ನಿದ್ರೆ ಬರಲೊಲ್ಲದು " ಕಷ್ಟದ ಹನಿ ಸುರಿಸದೆ, ದುಡಿದು ದಣಿದು ಅನ್ನ ಸಂಪಾದಿಸುವ ಜನರಲ್ಲಿಯೇ ಜೀವಿಸುವ ತಮ್ಮಂಥ ಅದೆಷ್ಟು-ಮಂದಿ ತಿರುಗುವರೋ " ಎಂಬ ಸಮಸ್ಯೆಯೊಂದು ಆತನ ಮುಂದೆ. ಅಂತೂ ಶ್ರಮಕ್ಕಾಗಿ ಮೌಲ್ಯವೆಂಬ ವಿಚಾರ ವನ್ನು ದೃಢೀಕರಿಸಿದ ನಾತ. ಜೊಂಪು ತೆಗೆದುಕೊಂಡಿತು.

ದೊಡ್ಡ ತಲೆಯುಳ್ಳ ಹಿರಿ ವ್ಯಕ್ತಿಯು ಬೋಳೆ ಕುಡಿಸು, ತಾನು ದುಡಿದು ಬಂದುದಕ್ಕೆ ಹಿಡಿತಿನ ಒಡ್ಡು ಕಟ್ಟಿ ನಿಲ್ಲಿಸಿದ ಸಿರಿಯ ಸೊಬಗಿನಲ್ಲಿ ತೇಲತೊಡಗಿದ್ದಾನೆ. ದುಡಿಯುದೇ ಇದ್ದು, ದುಡಿದ ಜನರಲ್ಲಿ ಭಾಗಿಗಳಾಗುವ ಜನರನ್ನು ಕಂಡರೆ, ಕರ್ತವ್ಯದ ಹಿರಿಮೆ ತಿಳಿಸಿ, ದುಡಿಯಲು ಪ್ರೋತ್ಸಾಹ ನೀಡತೊಡಗಿದ್ದಾನೆ. ಅಷ್ಟರಲ್ಲಿ "ತಿರ್‍ಕೊಳ್ತಾದರೂ ಏಳಾಂಗಿಲ್ಲೇನ್ನೀ, ಏಳ"

ಅನುವ ಧ್ವನಿಯಿಂದ ಹಠಾತ್ತಾನೆ ಎದ್ದು ನೋಡುತ್ತಾನೆ. ತಾನಿದ್ದುದು ಗುಡಿಯಲ್ಲಿ ಮಾತ್ರ. ಹೆಂಡತಿಯಮುಂದೆ ತಾನು ಕಂಡ ಕನಸು ಹೇಳಿದನು. ಪಾಪ! ಹೆಂಡತಿಗಾದರೂ ಏನು ತಿಳಿಯಬೇಕು; ಕನಸಿನಲ್ಲಿ ಕಂಡ ವ್ಯಕ್ತಿಯಬಗ್ಗೆ. ಪೈಗಂಬರೋ, ಬಸವಣ್ಣನೋ, ಕಾರ್ಲಮಾರ್ಕ್ಸನೋ, ಲೆನನ್ನನೋ, ಮಹಾ-ತ್ಮಾಜಿಯೋ ಯಾವ ಮಹಿಮನೆಂದು ಉಳಿದವರಿಗಾದರೂ ತಾನೆ ಹೇಗೆ ತಿಳಿದೀತು.

ಹೆಂಡತಿಯನ್ನು ಕರಿಯಲು ಕಳಿಸಿದನು. ತಾನೋರ್‍ವರ ಮುಂದೆ ತನ್ನವಿಚಾರ ಮುಂದಿಟ್ಟನು. ಆತನಲ್ಲಿ ಮೊರೆಯಿಟ್ಟು

ಬೇಡಿಕೊಂಡನು. 'ಈರಣ್ಣ ನಿಗೆ' ದಯಬಂದು ಒಂದು ಗುದ್ದಲಿಯನ್ನು ಕೊಟ್ಟನು. ಪಡೆದು ಕೊಂಡು ಗುಡಿಯನ್ನು ಸೇರಿದನು. ಹೆಂಡತಿಯೂ ಬಂದಳು. ತಂದುತಂದ ಅನ್ನ ಊಟ ಮಾಡಿದರು. ಮುಂದೆ ದುಡಿಯಲು ತೊಡಗಿದರು. ಗುಡಿಯನ್ನು ಬಿಟ್ಟು ಊರ ಮುಂದಿನ ಬಯಲುಸ್ಥಳದಲ್ಲಿ ಎಲೆ ಮನೆ ಕಟ್ಟಿ ವಾಸಿಸ ತೊಡಗಿದರು. ಮಾನವ ವಿನಾಶಕ ಜಹ ತಂಬಾಕದ ಚಟವಂಟಿಗ್ಗೊಂಗೊಳಿತು, ಶ್ರಮಜೀವಿಗೆ. ಓ ರ್ಷ ರ ದು ಡಿ ತ ಹೊಟ್ಟೆಗಾದರೆ, ಇನ್ನೋರ್ವರ ದುಡಿತದ ಫಲ ಬುಟ್ಟಿಗೆ ಬೀಳತೊಡಗಿತು. ಕೂಡಿದ ಜೋಳಗಳನ್ನು ವಿನಿಮಯಿಸಿ ಬಂದ ದುಡ್ಡು ಅಡಕಲ ಸಾಲಿನ ಕುಡಿಕೆಯು ಬಳಿಸೇರ ತೊಡಗಿತು. ಇವರ ದುಡಿತ ಊರವರಿಗೆ ಮೆಚ್ಚುಗೆಯಾಯಿತು. ಗತಿಯಿಲ್ಲದೆ ಅಲೆದಾಡುವ ಬಾಳು, ಒಂದೆಡೆ ನೆಲಿಸಿ ಸ್ಥಾಯಿಯಾಯಿತು. ವರುಷಗಳು ಗತಿಸಿದಂತೆ ಸಿರಿಯು ಚೆಲುವು ಪುಟಿಯು ತೊಡಗಿತು. ಮಕ್ಕಳೂ ಆದವು, ಆ ದಂಪತಿಗಳಿಗೆ ಉಲ್ಲಾಸವು ಅವರನ್ನು ಮುತ್ತಿತು. ಮುಂದೆ ವರುಷಗಳೆದಂತೆ ಹುಡುಗರು ದೊಡ್ಡವರಾದರು. ಶ್ರಮದ ಬಲದಿಂದ ಹುಲ್ಲು ಗುಡಿಸಲ ಬದಲು ಸೊಬಗಿನ ಸದನ ವಾಯಿತು. ವಿದ್ಯೆಯಿಂದ ಕಂಗೊಳಿಸುವ ಮಕ್ಕಳು. ತಾನಾದರೋ ವಯಸ್ಕರ ಸಾಲೆಸೇರಿ ಓದು ಕಲಿತವನಾದ. ಎರಡನೆಯವರ ಹೊಲ ಮಾಡುತ್ತ-ಮಾಡುತ್ತ ತಾನೇ ಕೆಲವು ಭೂಮಿಯನ್ನು ಕೊಂಡಾಯಿತು. ಕಿರಿಯವರಿಬ್ಬರು ಓದು ಮುಂದೆ ಸಾಗಿಸಿದರು. ಹಿರಿಯವನು ವಾಣಿಜ್ಯ ಕುಶಲನಾದನು. ಮೊದಲು ತೆಗೆದುದು ಕಿರಾಣಿ ಅಂಗಡಿಯಾದರೂ, ಇಂದು ಬಟ್ಟೆ ಮೊದಲ್ಗೊಂಡು ವ್ಯವಹಾರ ಸಾಗಿದೆ. ಓದು ಸಾಗಿಸಿದ ಕಿರಿಯ

ಸಾಹಿತ್ಯಸೇವಕರಾಗಿ, ಜನ ಜೀವನದ ಜಟಿಲ ಸಮಸ್ಯೆಗಳನ್ನು ಲೇಖಣಿಯ ಸಹಾಯದಿಂದ ಬಿಡಿಸಿ, ವೃತ್ತಪತ್ರಿಕೆ ಮುಖಾಂತರ ಜನರಮುಂದೆ ಇಡತೊಡಗಿದ್ದಾರೆ. ತಿರುಪೆಯವರ ಲೇಖನಗಳೆಂದರೆ ಜನರಿಗೆ ನಚ್ಚಿನವಾಗಿವೆ. ಐವತ್ತು ವರುಷದವನಾದರೂ ತರುಣತನದ ಉತ್ಸಾಹದಿಂದ ಅಳಿಯೊಡನೆ ಒಕ್ಕಲುತನ ಸಾಗಿಸ ತೊಡಗಿದ್ದಾನೆ.

ಅಂದು ಇದೇ ಊರಗುಡಿಯಲ್ಲಿ ಬೆಳಗಿನ ಜಾವದಲ್ಲಿ ಕಂಡ ಕನಸು ಇಂದು ನನಸಾಗಿದೆ. ಅವರ ಇರುವಿಕೆ ಮಾರ್ಪಾಟ ಹೊಂದಿದ ಅಕ್ಷರಗಳಿಂದ ಸೂಚ್ಯವಾಗುತ್ತದೆ. ತಿರುಕ 'ಸಂಗ್ಯಾ' ಹೋಗಿ ಸಿರಿವಂತ ಸಂಗಣ್ಣಾ ತಿರುಪೆಯವರೆಂದು ಜನರು ಕರೆಯ ಹತ್ತಿದ್ದಾರೆ. ಭಿಕ್ಷುಕ 'ಮಲ್ಲ' 'ಒಂತುಣ್ಕ ರೊಟ್ಟಿ ನೀಡ್ರೆಂದು'' ಸಂಗಣ್ಣಾ ತಿರುಪೆಯವರ ಮನೆ ಸೇರಿದನು. ಅವರ ಸ್ವಾನುಭವ ಮೃದುಮಾತಿನ ಸುಧೆಉಂಟೆ, ದಿನಮಣಿಯು ಕೆಂಪು ವರ್ಣ ತ್ಯಜಿಸಿ ಶುಭ್ರಕಾಂತಿ ತೂರುವ ಸುಮಂಗಲ ಹೊತ್ತಿನಲ್ಲಿ, ಸಂಗಣ್ಣಾ ತಿರುಪೆಯವರು ನೀಡಿದ ಗುದ್ದಲಿ ಹೊಂದಿದವನಾಗಿ ತಿರುಕ 'ಮಲ್ಲ' ಶ್ರಮಜೀವಿಯಾಗಲು ಉತ್ಸಾಹದಿಂದ ಅದೇ ತಾನೆ ಹೊರ ಬಿದವನಾಗಿದ್ದ.

ಭಾರತೀ ಪರಿಚಯ

ಸಾಹಿತ್ಯ ಸರ್ವೇಶ್ವರಿ ಸರಸ್ವತಿಯು ಸದ್ಭಕ್ತರಾದ ಶಿಕ್ಷಕರು ಸಮಾಜ ಸೇವೆಗೈಯುತ್ತ ಸಾಹಿತ್ಯ ಸೇವೆಯಲ್ಲೂ ಸಮಭಾಗಿಗಳಾಗುತ್ತ ಬರುತ್ತಿರುವದು ಸಂತಸದ ಸಂಗತಿ. ಇತ್ತಿತ್ತಲಾಗಿ ಪ್ರಾಥಮಿಕ ಶಿಕ್ಷಕ ವರ್ಗದಲ್ಲೂ ಸಾಹಿತಿಗಳ ಬೆಳೆ ಹುಲುಸಾಗಿ ಬೆಳೆಯತೊಡಗಿದೆ. ಆದರೂ ಆಗಾಗ್ಗೆ ಅನಾನುಕೂಲ ಪರಿಸ್ಥಿತಿ, ಆರ್ಥಿಕ ಮುಗ್ಗಟ್ಟು ಇತ್ಯಾದಿ ಬಿರುಬಿಸಿಲು, ಬಿರುಗಾಳಿ, ಬಿರು ಮಳೆಗಳ ಸೆಳಕು ಬೆಳೆಯನ್ನು ನೆಲಕ್ಕೆ ಕೆಡವುತ್ತಲಿದೆ. ಒಂದೆಡೆ ಆ ಬೆಳೆಗೆ ಹದವಾದ ರಾಬು, ಸಕಾಲ ಮಳೆ, ಅನಕೂಲ ಗಾಳಿ ದೊರೆಯದೆ ಬೀಜ ಮೊಳಕೆಯೊಡೆಯುತ್ತಲೇ ಬೇರನ್ನಪ್ಪಿಕೊಳ್ಳುತ್ತಲಿದೆ. ಅಂಥ ಅಂಕುರಗಳಿಗೆ ನೀರೆರೆದ, ನಿಲ್ಲುವಂತೆ ಮಾಡಿ ಇಂಬೆಳಸು ಬೆಳೆದು ರಸಭರಿತ ಕಾಳಿನ ಕಣಜವನ್ನೇ ನೀಡಬೇಕೆಂಬುದು ನಮ್ಮ ಹೆಗ್ಗುರಿ,

ಬಡಪಾಯಿ ಪ್ರಾಥಮಿಕ, ಶಿಕ್ಷಕರ ಮೂಲೆ ಗುಂಪಾದ ಸಾಹಿತ್ಯ ಕೃತಿಗಳನ್ನು ಹೊರತರುವದರ ಜೊತೆಗೆ ನಾಳಿನ ನಾಡಿನ ನಾಯಕರಾದ ಇಂದಿನ ಮಕ್ಕಳ ಸಾಹಿತ್ಯವನ್ನೂ ತುಂಬಿಕೊಡುವ ಹಿರಿಯಾಸೆಯಿಂದ ಈ ಬೃಹತ್ಕಾರ್ಯಕ್ಕೆ ಕೈಹಾಕಿದ್ದೇವೆ. ಇಂತಹ ಕಾರ್ಯದ ಸದುಪಯೋಗಕ್ಕೆ ಸಕಲ ಶಿಕ್ಷಕ ಮಿತ್ರರ ಬಲವಾದ ಬೆಂಬಲವನ್ನು ಕೋರುತ್ತೇವೆ. ಈ ಪವಿತ್ರ ಸೇವೆಯಲ್ಲಿ ನಮಗೆ ಸುಖವಿದೆ. ನೀವೆಲ್ಲ ನೆರವು ನೀಡಿ ನಮ್ಮಿಂದ ಸೇವೆ ಸಲ್ಲಿಸಿಕೊಳ್ಳುವಿರಾಗಿ ಆಶಿಸಿದ್ದೇವೆ.

ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥವಾಗಿ ತೆರೆದ

ಭಾರತೀ ಸಾಹಿತ್ಯ ಭಂಡಾರ, ಯರನಾಳ.